e-mail registrar@Uni-mysore-ac-in
ದೂರವಾಣಿ ಸಂಖ್ಯೆ: 2419277/2419210
ಫ್ಯಾಕ್ಸ್: 0821-3419363/24193011
www.uni-mysore-ac-in

# ಮೈಸೂರು ವಿಶ್ವವಿದ್ಯಾನಿಲಯ

ಸ್ಥಾಪನೆ 1916

ಸಂಖ್ಯೆ: ಯುಎ-3/334/2023-2024
ಅಡಕ: ನಡವಳಿಗಳು(1-13)

ವಿಶ್ವವಿದ್ಯಾನಿಲಯ ಕಾರ್ಯಸೌಧ
ಕ್ರಾಫರ್ಡ್ ಭವನ, ಮೈಸೂರು

ದಿನಾಂಕ 09-07-2024
**"ಪ್ರಮಾಣಿತ ಅಂಚೆ ಮೂಲಕ"**

ಶಿಕ್ಷಣ ಮಂಡಳಿ ಸದಸ್ಯರುಗಳಿಗೆ,

ಮಾನ್ಯರೆ,

ವಿಷಯ: ದಿನಾಂಕ: 28-06-2024ರಂದು ನಡೆದ ಶಿಕ್ಷಣ ಮಂಡಳಿ ಮೊದಲನೇ ಸಾಮಾನ್ಯ ಸಭೆಯ ನಡವಳಿಯನ್ನು ಕಳುಹಿಸುವ ಬಗ್ಗೆ.

* * * * *

ದಿನಾಂಕ:28-06-2024ರಂದು ಬೆಳಗ್ಗೆ 11-30 ಗಂಟೆಗೆ, ಮೈಸೂರು ವಿಶ್ವವಿದ್ಯಾನಿಲಯದ ಕ್ರಾಫರ್ಡ್ ಭವನ, ಶಿಕ್ಷಣ ಮಂಡಳಿ ಸಭಾಂಗಣದಲ್ಲಿ ನಡೆದ, ಶಿಕ್ಷಣ ಮಂಡಳಿ ಮೊದಲನೇ ಸಾಮಾನ್ಯ ಸಭೆಯ ನಡವಳಿಗಳನ್ನು ವಿಶ್ವವಿದ್ಯಾನಿಲಯದ ಜಾಲತಾಣದಲ್ಲಿ ಅಳವಡಿಸಿದೆ. ನಡವಳಿಯಲ್ಲಿ ದಾಖಲಿಸಿರುವ ಯಾವುದೇ ಅಂಶದ ಯಥಾರ್ಥತೆಯ ಬಗ್ಗೆ ಸಭೆಯಲ್ಲಿ ಹಾಜರಿದ್ದ ಸದಸ್ಯರುಗಳಿಂದ ನಡವಳಿಯ ಬಗ್ಗೆ ನಿಮ್ಮ ಆಕ್ಷೇಪಣೆ(ಗಳು) ಏನಾದರೂ ಇದ್ದಲ್ಲಿ ಈ ಬಗ್ಗೆ "ಕುಲಸಚಿವರು, ಮೈಸೂರು ವಿಶ್ವವಿದ್ಯಾನಿಲಯ, ಕ್ರಾಫರ್ಡ್ ಭವನ, ಮೈಸೂರು" ಇವರನ್ನು ಉದ್ದೇಶಿಸಿ ಬರೆದ ಪತ್ರವನ್ನು ಕುಲಸಚಿವರು, ಮೈಸೂರು ವಿಶ್ವವಿದ್ಯಾನಿಲಯ, ಕ್ರಾಫರ್ಡ್ ಭವನ, ಮೈಸೂರು-570005 ಇವರಿಗೆ ನೇರವಾಗಿ ತಲುಪಿಸುವಂತೆ ಕೋರಲಾಗಿದೆ. ಸದರಿ ನಡವಳಿಗಳಿಗೆ ಯಾವುದೇ ಆಕ್ಷೇಪಣೆ ಬಾರದಿದ್ದಲ್ಲಿ, ನಡವಳಿಯಲ್ಲಿ ದಾಖಲಿಸಿರುವ ಎಲ್ಲಾ ಅಂಶಗಳು ಸರಿಯಾಗಿವೆ ಎಂದು ಪರಿಗಣಿಸಲ್ಪಡುತ್ತವೆ.

ತಮ್ಮ ನಂಬುಗೆಯ

9/7/2024

ಕುಲಸಚಿವ
ಮೈಸೂರು ವಿಶ್ವವಿದ್ಯಾನಿಲಯ
ಮೈಸೂರು

ಪ್ರತಿ:

1. ಗೌರವಾನ್ವಿತ ರಾಜ್ಯಪಾಲರ ಕಾರ್ಯದರ್ಶಿಗಳು, ರಾಜಭವನ, ಬೆಂಗಳೂರು – ಘನತೆವೆತ್ತ ರಾಜ್ಯಪಾಲರ ಅವಗಹಾನೆಗೆ ತರಬೇಕಾಗಿ ಕೋರಲಾಗಿದೆ.
2. ಪ್ರಧಾನ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ(ವಿಶ್ವವಿದ್ಯಾನಿಲಯ), ಬಹುಮಹಡಿಗಳ ಕಟ್ಟಡ, ಬೆಂಗಳೂರು.
3. ಎಲ್ಲಾ ಉಪಕುಲಸಚಿವರು/ಸಹಾಯಕ ಕುಲಸಚಿವರು(ಶೈಕ್ಷಣಿಕ/ಆಡಳಿತ/ಅಭಿವೃದ್ಧಿ/ಪರಿಶಿಷ್ಟಜಾತಿ ಮತ್ತು ಪರಿಶಿಷ್ಟ ವರ್ಗಗಳ ವಿಶೇಷ ಘಟಕ), ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
4. ಸಂಯೋಜಕರು, (ICD) ಗಣಕ ವಿಜ್ಞಾನ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು – ಶಿಕ್ಷಣ ಮಂಡಳಿ ಸಭೆಯ ನಡವಳಿಯನ್ನು ವಿಶ್ವವಿದ್ಯಾನಿಲಯದ ಜಾಲತಾಣದಲ್ಲಿ ಅಳವಡಿಸಲು ಕ್ರಮವಹಿಸುವುದು.
5. ಮಾನ್ಯ ಕುಲಪತಿ/ಕುಲಸಚಿವ/ಕುಲಸಚಿವ(ಪರೀಕ್ಷಾಂಗ)/ಹಣಕಾಸು ಅಧಿಕಾರಿಗಳ ಆಪ್ತ ಸಹಾಯಕರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
6. ಕಛೇರಿ ಪ್ರತಿ.

AC Forwarding letter

# ಮೈಸೂರು ವಿಶ್ವವಿದ್ಯಾನಿಲಯ

**ಮೈಸೂರು ವಿಶ್ವವಿದ್ಯಾನಿಲಯದ ಕ್ರಾಫರ್ಡ್ ಭವನದ ಶಿಕ್ಷಣ ಮಂಡಳ ಸಭಾಂಗಣದಲ್ಲಿ ದಿನಾಂಕ: 28-06-2024 ರಂದು ಪೂರ್ವಾಹ್ನ 11.30 ಗಂಟೆಗೆ ನಡೆದ ಶಿಕ್ಷಣ ಮಂಡಳ ಮೊದಲನೇ ಸಾಮಾನ್ಯ ಸಭೆಯ ನಡಾವಳಿ.**

**ಉಪಸ್ಥಿತರು:**

1. ಪ್ರೊ. ಎನ್.ಕೆ.ಲೋಕನಾಥ್, ಕುಲಪತಿಗಳು – ಅಧ್ಯಕ್ಷರು
2. ಶ್ರೀ ಸಿ.ಎನ್. ಮಂಜೇಗೌಡ, ವಿಧಾನ ಪರಿಷತ್ ಸದಸ್ಯರು – ಸದಸ್ಯರು
3. ಪ್ರೊ. ಯಜ್ಞಮೂರ್ತಿ ಶ್ರೀಕಾಂತ್ – ಸದಸ್ಯರು
4. ಡಾ. ಮುಜೀದ ಬಾನು – ಸದಸ್ಯರು
5. ಡಾ. ಕೆ. ಗಣೇಶ – ಸದಸ್ಯರು
6. ಡಾ. ಪ್ರಿಯ ಸಿ ಜೆ – ಸದಸ್ಯರು
7. ಶ್ರೀಮತಿ ಕೆ.ಎಂ.ಪದ್ಮವತಿ – ಸದಸ್ಯರು
8. ಪ್ರೊ. ಬಿ.ಮಹದೇವಪ್ಪ – ಸದಸ್ಯರು
9. ಪ್ರೊ. ಎಂ.ಜಿ.ಮಂಜುನಾಥ – ಸದಸ್ಯರು
10. ಪ್ರೊ. ಡಿ.ಸೋನೆರ್ ನಂದಪ್ಪ – ಸದಸ್ಯರು
11. ಪ್ರೊ. ಎಸ್.ಜೆ.ಮಂಜುನಾಥ್ – ಸದಸ್ಯರು
12. ಪ್ರೊ. ಎಂ.ಸುರೇಶ್ ಬೆಂಜಮಿನ್ – ಸದಸ್ಯರು
13. ಪ್ರೊ. ಸಿ.ವೆಂಕಟೇಶ್, ನಿರ್ದೇಶಕರು (ಪ್ರಭಾರ), ದೈಹಿಕ ಶಿಕ್ಷಣ – ಸದಸ್ಯರು
14. ಪ್ರೊ. ಎಂ.ಎ.ಶ್ರೀಧರ್ – ಸದಸ್ಯರು
15. ಪ್ರೊ. ಆಯಿಷಾ ಎಂ. ಷರೀಫ್ – ಸದಸ್ಯರು
16. ಪ್ರೊ. ಡಿ.ಆನಂದ್, ನಿರ್ದೇಶಕರು (ಪ್ರಭಾರ), ಕಾಲೇಜು ಅಭಿವೃದ್ಧಿ ಮಂಡಳಿ – ಸದಸ್ಯರು
17. ಡಾ. ಸರಸ್ವತಿ.ಪಿ, ಗ್ರಂಥಪಾಲಕರು, ಸ್ನಾತಕೋತ್ತರ ಗಂಥಾಲಯ – ಸದಸ್ಯರು
18. ಡಾ. ಸುಷ್ಮಾ.ಎಸ್.ಎನ್, ವಿದ್ಯಾರ್ಥಿ ಕ್ಷೇಮಪಾಲನಾ ನಿರ್ದೇಶಕರು (ಪ್ರಭಾರ) – ಸದಸ್ಯರು
19. ಪ್ರೊ. ಎನ್.ನಾಗರಾಜ, ನಿರ್ದೇಶಕರು, ಪಿ.ಎಂ.ಇ.ಬಿ. – ಸದಸ್ಯರು
20. ಡಾ. ಬಸಪ್ಪ, ಕುಲಸಚಿವ (ಪರೀಕ್ಷಾಂಗ) – ಸದಸ್ಯರು
21. ಶ್ರೀಮತಿ ರೇಖಾ ಕೆ ಎಸ್, ಹಣಕಾಸು ಅಧಿಕಾರಿ – ಸದಸ್ಯರು
22. ಶ್ರೀಮತಿ ವಿ.ಆರ್. ಶೈಲಜ, ಕೆ.ಎ.ಎಸ್., ಕುಲಸಚಿವರು – ಸದಸ್ಯ ಕಾರ್ಯದರ್ಶಿ

**ಅನುಪಸ್ಥಿತರು**

1. ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ ಬೆಂಗಳೂರು ಇವರ ಪರವಾಗಿ ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಪ್ರಾದೇಶಿಕ ಕಛೇರಿ, ಮೈಸೂರು.
2. ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ, ಬೆಂಗಳೂರು.
3. ಶ್ರೀ ದರ್ಶನ್ ಧ್ರುವನಾರಾಯಣ, ವಿಧಾನ ಸಭಾ ಸದಸ್ಯರು
4. ಶ್ರೀ ಎಂ.ಪಿ. ಕುಶಾಲಪ್ಪ, ವಿಧಾನ ಪರಿಷತ್ ಸದಸ್ಯರು
5. ಡಾ. ಅಂತೋನಿ ಪೌಲ್ ರಾಜ್ .ಸಿ.
6. ಪ್ರೊ. ನಾಗರಾಜ ನಾಯ್ಕ್
7. ಪ್ರೊ. ಕೆ. ಸದಾಶಿವ

ಮೊದಲಿಗೆ ಮಾನ್ಯ ಕುಲಸಚಿವರು ಸಭೆಯ ಅಧ್ಯಕ್ಷರಾಗಿರುವ ಮಾನ್ಯ ಕುಲಪತಿ ಪ್ರೊ. ಎನ್.ಕೆ. ಲೋಕನಾಥ್ ಅವರನ್ನು, ಉಪಸ್ಥಿತರಾಗಿರುವ ಗೌರವಾನ್ವಿತ ಶ್ರೀ ಸಿ.ಎನ್. ಮಂಜೇಗೌಡ ಎಂ.ಎಲ್.ಸಿ., ರವರನ್ನು, ಎಲ್ಲಾ ನಿಕಾಯದ ಡೀನರುಗಳು, ಅಧಿಕಾರಿ ವರ್ಗದವರು, ಸದಸ್ಯರುಗಳನ್ನು ಹಾಗೂ ಪತ್ರಿಕಾ ಮಾಧ್ಯಮದವರುಗಳನ್ನು ಸ್ವಾಗತಿಸಿದರು.

ನಂತರ ಇದುವರೆವಿಗೂ ಶಿಕ್ಷಣ ಮಂಡಳಿ ಸದಸ್ಯರಾಗಿ ಸೇವೆ ಸಲ್ಲಿಸಿ ನಿರ್ಗಮಿಸಿರುವ ಶ್ರೀಮತಿ ಸೌಮ್ಯ ಈರಪ್ಪ.ಕೆ, ಪ್ರಾಂಶುಪಾಲರು, ಶೇಷಾದ್ರಿಪುರಂ ಪದವಿ ಕಾಲೇಜು, ಮೈಸೂರು ಇವರ ಸೇವೆಯನ್ನು ಸ್ಮರಿಸಿ ದಾಖಲಿಸಲಾಯಿತು.

ತದನಂತರ ಮೈಸೂರು ವಿಶ್ವವಿದ್ಯಾನಿಲಯದ ವಿಶ್ರಾಂತ ಕುಲಪತಿಗಳಾದ ಪ್ರೊ. ಎಂ ಮಾದಯ್ಯ ಇವರು ದೈವಾಧೀನರಾಗಿರುವ ಪ್ರಯುಕ್ತ ಸಂತಾಪ ಸೂಚಿಸಿ ಎರಡು ನಿಮಿಷಗಳ ಕಾಲ ಮೌನಾಚರಣೆಯನ್ನು ನಡೆಸಲಾಯಿತು.

ಮಾನ್ಯ ಕುಲಪತಿಯವರ ಅನುಮತಿಯ ಮೇರೆಗೆ ಈ ಕೆಳಕಂಡ ಕಾರ್ಯಸೂಚಿಗಳನ್ನು ಕುಲಸಚಿವರು ಸಭೆಯಲ್ಲಿ ಮಂಡಿಸಿದರು.

| ವಿಷಯ ಸಂಖ್ಯೆ | ವಿಷಯ ಸಂಕ್ಷಿಪ್ತವಾಗಿ |
|---|---|
| I.I | ದಿನಾಂಕ: 31-01-2024ರಂದು ಜರುಗಿದ ಶಿಕ್ಷಣ ಮಂಡಳಿ ಎರಡನೇ ಸಾಮಾನ್ಯ ಸಭೆಯ ನಡವಳಿಯನ್ನು ದೃಢೀಕರಿಸುವ ಬಗ್ಗೆ. |
| **ತೀರ್ಮಾನ** | **ದಿನಾಂಕ: 31-01-2024ರಂದು ಜರುಗಿದ ಶಿಕ್ಷಣ ಮಂಡಳಿ ಎರಡನೇ ಸಾಮಾನ್ಯ ಸಭೆಯ ನಡವಳಿಯನ್ನು ಹಾಗೂ ತೆಗೆದುಕೊಂಡಿರುವ ಕ್ರಮವನ್ನು ವಿದ್ಯಾವಿಷಯಕ ಪರಿಷತ್ ಸಭೆಯು ದೃಢೀಕರಿಸಿತು.** |
| II.1 | ಮೈಸೂರು ವಿಶ್ವವಿದ್ಯಾನಿಲಯ ಸ್ಕೂಲ್ ಆಫ್ ಇಂಜಿನಿಯರಿಂಗ್ ನಿಕಾಯಕ್ಕೆ ಡೀನರನ್ನು ನೇಮಿಸಿರುವ ಬಗ್ಗೆ – ಅನುಸಮರ್ಥನೆಗಾಗಿ. |
| **ತೀರ್ಮಾನ** | **ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಯಗಳ ಕಾಯ್ದೆ 2000 ಪ್ರಕರಣ 21(1)ರ ಅನ್ವಯ ಪ್ರೊ. ಎಸ್.ಜೆ. ಮಂಜುನಾಥ್, ಪ್ರಾಧ್ಯಾಪಕರು, ವ್ಯವಹಾರ ಆಡಳಿತ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರನ್ನು ದಿನಾಂಕ: 29-02-2024 ರಿಂದ ಜಾರಿಗೆ ಬಂದಂತೆ ಎರಡು ವರ್ಷಗಳ ಅವಧಿಗೆ ಶಿಕ್ಷಣ ಮಂಡಳಿ ಸಭೆಯ ನಿರ್ಣಯವನ್ನು ಕಾಯ್ದಿರಿಸಿ, ಮೈಸೂರು ವಿಶ್ವವಿದ್ಯಾನಿಲಯ ಸ್ಕೂಲ್ ಆಫ್ ಇಂಜಿನಿಯರಿಂಗ್ ನಿಕಾಯಕ್ಕೆ ಡೀನರನ್ನಾಗಿ ನೇಮಕ ಮಾಡಿ ಅಧಿಸೂಚನೆ ಹೊರಡಿಸಿರುವುದನ್ನು ಶಿಕ್ಷಣ ಮಂಡಳಿ ಸಭೆಯು ಅನುಸಮರ್ಥಿಸಿತು.** |
| II.2 | ವಿಶ್ವವಿದ್ಯಾನಿಲಯದಲ್ಲಿ "ದೇವಮ್ಮ ಪುಟ್ಟಚ್ಚಿ ಸಿದ್ದೇಗೌಡ ಮತ್ತು ಡಾ. ವಿ.ಟಿ. ಸುಶೀಲ ಜಯರಾವ್ ದತ್ತಿ. ಮಂಡ್ಯ ನಗದು ಬಹುಮಾನ" ದತ್ತಿಯನ್ನು ಸ್ಥಾಪನೆ ಮಾಡುವ ಬಗ್ಗೆ. |
| **ತೀರ್ಮಾನ** | **ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000ರ ಪ್ರಕರಣ 31 (2) (X) ಪ್ರಕಾರ ದಾನಿಗಳು ದತ್ತಿಯ ನಿಬಂಧನೆಯಂತೆ ಪ್ರತಿ ವರ್ಷ ಸದರಿ ದತ್ತಿಯ ಮೂಲಧನಕ್ಕೆ ಕ್ರೋಢೀಕೃತವಾಗುವ ಬಡ್ಡಿಯ ಹಣದಲ್ಲಿ ಶೇ.20ರಷ್ಟನ್ನು ದತ್ತಿಯ ಮೂಲ ಧನಕ್ಕೆ ಸೇರಿಸಿ, ಉಳಿದ ಶೇ.80ರಷ್ಟು ಬಡ್ಡಿಯ ಹಣವನ್ನು ಮೇಲೆ ನಮೂದಿಸಿರುವ ದತ್ತಿಯ ಷರತ್ತಿನಂತೆ ಸಂಬಂಧಿತ ವಿಷಯ/ಪತ್ರಿಕೆಯಲ್ಲಿ ಎಂ.ಎ ಪರೀಕ್ಷೆಯಲ್ಲಿ ಕನ್ನಡ ವಿಷಯ/ಪತ್ರಿಕೆಯಲ್ಲಿ ಪ್ರಥಮ ಬಾರಿಗೆ ತೇರ್ಗಡೆಯಾಗಿದ್ದು, ಅತೀ ಹೆಚ್ಚು ಅಂಕಗಳಿಸುವ (ಯಾವುದೇ** |

| | |
|---|---|
| | ವರ್ಷಗಳಿಗೆ/ಸೆಮಿಸ್ಟರ್‌ಗಳಿಗೆ ಶ್ರೇಣಿಯನ್ನು ಪ್ರಕಟಿಸುವ ಸಲುವಾಗಿ ಗಳಿಸಲಾಗುವ ಅಂಕಗಳನ್ನು ಪಡೆದು) ವಿದ್ಯಾರ್ಥಿಗೆ ವಿಶ್ವವಿದ್ಯಾನಿಲಯದಲ್ಲಿ "ದೇವಮ್ಮ ಪುಟ್ಟಚ್ಚಿ ಸಿದ್ದೇಗೌಡ ಮತ್ತು ಡಾ. ವಿ.ಟಿ. ಸುಶೀಲ ಜಯರಾವ್ ದತ್ತಿ. ಮಂಡ್ಯ ನಗದು ಬಹುಮಾನ" ದತ್ತಿಯನ್ನು ಸ್ಥಾಪನೆ ಮಾಡಲು ಶಿಕ್ಷಣ ಮಂಡಳ ಸಭೆಯು ಅನುಮೋದಿಸಿತು. |
| II.3 | ವಿಶ್ವವಿದ್ಯಾನಿಲಯದಲ್ಲಿ (I) Prof. S. Sathyanarayan and Prof. P.N. Satish Gold Medal, (2) Prof . C. Srikantappa and Late Prof. A.S. Janardhan Gold Medal ಮತ್ತು (3) Smt. Sharadamma and Sri. K.G. Narasimaha Shastry Gold Medal ದತ್ತಿಯನ್ನು ಸ್ಥಾಪನೆ ಮಾಡುವ ಬಗ್ಗೆ. |
| ತೀರ್ಮಾನ | ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ ೨೦೦೦ರ ಪ್ರಕರಣ ೩೧ (2) **(X)** ಪ್ರಕಾರ ಪ್ರೊ. ಕೆ.ಎನ್.ಪ್ರಕಾಶ್ ನರಸಿಂಹ, ಅಧ್ಯಕ್ಷರು, ಭೂವಿಜ್ಞಾನ ಅಧ್ಯಯನ ಮಂಡಳಿ, ಭೂವಿಜ್ಞಾನ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರು ದಾನಿಗಳು ದತ್ತಿಯ ನಿಬಂಧನೆಯಂತೆ ಪ್ರತಿ ವರ್ಷ ಸದರಿ ದತ್ತಿಯ ಮೂಲಧನಕ್ಕೆ ಕ್ರೋಢೀಕೃತವಾಗುವ ಬಡ್ಡಿಯ ಹಣದಲ್ಲಿ ಶೇ.೨೦ರಷ್ಟನ್ನು ದತ್ತಿಯ ಮೂಲ ಧನಕ್ಕೆ ಸೇರಿಸಿ, ಉಳಿದ ಶೇ.೮೦ರಷ್ಟು ಬಡ್ಡಿಯ ಹಣವನ್ನು ಕೆಳಕಂಡ ದತ್ತಿಯ ಷರತ್ತಿನಂತೆ ಸಂಬಂಧಿತ ವಿಷಯ/ಪತ್ರಿಕೆಯಲ್ಲಿ ಪ್ರಥಮ ಬಾರಿಗೆ ತೇರ್ಗಡೆಯಾದ ಅತಿ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗೆ ಪ್ರದಾನ ಮಾಡಲು ಈ ಕೆಳಕಂಡ ಮೂರು ಚಿನ್ನದ ಪದಕದ ದತ್ತಿಗಳನ್ನು ಸ್ಥಾಪನೆ ಮಾಡಲು ಶಿಕ್ಷಣ ಮಂಡಳಿ ಸಭೆಯು ಅನುಮೋದಿಸಿತು. |

| ದತ್ತಿಯ ಹೆಸರು | **"Prof. S. Sathyanarayan and Prof. P.N. Satish Gold Medal"** |
|---|---|
| ಷರತ್ತುಗಳು | This Gold Medal should be awarded to the Candidate who has passed M.Sc. Geology or M.Sc. Applied Geology Examination with Highest Scorer in Sedimentary Petrology & Geotectonic Paper of 3rd Sem. M.Sc. Applied Geology **OR** Highest Scorer in Sedimentary Petrology and Structural Geology Paper of 1st Sem. M.Sc. Geology in First Attempt and Securing Highest Marks. |
| ಡಿ.ಡಿ. ವಿವರ | No. 575135/Dt. 08.04.2024 |
| ಪಾವತಿಸಿರುವ ಮೊತ್ತ | Rs.1,00,000/- |

| ದತ್ತಿಯ ಹೆಸರು | **"Prof. C. Srikantappa and Late Prof. A.S. Janardhan Gold Medal"** |
|---|---|
| ಷರತ್ತುಗಳು | This Gold Medal should be awarded to the Candidate who has passed M.Sc. Geology or M.Sc. Applied Geology Examination with Highest Scorer in Advanced Igneous Petrology Paper of 3rd Sem. of M.Sc. Applied Geology **OR** Highest Scorer in Igneous & Metamorphic Petrology Paper of 2nd Sem. of M.Sc. Geology in First Attempt and Securing Highest Marks. |

| | | |
|---|---|---|
| | ಡಿ.ಡಿ. ವಿವರ | No. 575134/Dt. 08.04.2024 |
| | ಪಾವತಿಸಿರುವ ಮೊತ್ತ | Rs.1,00,000/- |
| | ದತ್ತಿಯ ಹೆಸರು | **"Smt. Sharadamma and Sri. K.G.Narasimha Shastry Gold Medal"** |
| | ಷರತ್ತುಗಳು | This Gold Medal should be awarded to the Candidate who has passed M.Sc. Geology in First Attempt and Securing Highest Marks in All Sem. |
| | ಡಿ.ಡಿ. ವಿವರ | No. 575133/Dt. 08.04.2024 |
| | ಪಾವತಿಸಿರುವ ಮೊತ್ತ | Rs.1,00,000/- |
| II.4 | Physical Education/Environmental Studies ಪತ್ರಿಕೆಗಳ ವಿಶೇಷ ಪರೀಕ್ಷೆಯ ಬಗೆಗೆ. | |
| ತೀರ್ಮಾನ | 2020-2021ನೇ ಶೈಕ್ಷಣಿಕ ಸಾಲಿನಲ್ಲಿ ಪ್ರವೇಶಾತಿ ಹೊಂದಿದ್ದ ಸ್ನಾತಕ ಪದವಿಯ ವಿದ್ಯಾರ್ಥಿಗಳಿಗೆ ಮೊದಲ ಮೂರು ಸೆಮಿಸ್ಟರ್‌ಗಳ ಪೈಕಿ ಯಾವುದಾದರೂ ಒಂದು ಸೆಮಿಸ್ಟರ್‌ನಲ್ಲಿ **Physical Education/Environmental Studies** ಪತ್ರಿಕೆಯನ್ನು (3 ಕ್ರೆಡಿಟ್ಸ್) ಅಳವಡಿಸಿಕೊಂಡು ಪರೀಕ್ಷೆಯನ್ನು ನಡೆಸಬೇಕಾಗಿತ್ತು. ಆದರೆ 09 ಕಾಲೇಜಿನವರು ಮಾಹಿತಿ ಕೊರತೆಯಿಂದ ನಿಯಮಾವಳಿಗಳ ಪ್ರಕಾರ ಸದರಿ ಪತ್ರಿಕೆಗಳನ್ನು ಅಳವಡಿಸಿಕೊಳ್ಳದೇ ಈ ಪತ್ರಿಕೆಗಳ ಪರೀಕ್ಷೆಗಳು ಜರುಗಿರುವುದಿಲ್ಲ. ಮಾನ್ಯ ಕುಲಪತಿಗಳ ಅನುಮೋದನೆ ಮೇರೆಗೆ, ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಇದೊಂದು ವಿಶೇಷ ಸಂದರ್ಭವೆಂದು ಪರಿಗಣಿಸಿ ಅಂತಿಮ ಸೆಮಿಸ್ಟರ್ ಪರೀಕ್ಷೆ (ಆಗಸ್ಟ್ 2023) ಮುಗಿದ ನಂತರ ಸದರಿ ಪತ್ರಿಕೆಗಳ ಪರೀಕ್ಷೆ ಬರೆಯಲು ಅವಕಾಶ ಕಲ್ಪಿಸಲಾಗಿದ್ದು, ಅದರಂತೆ ಪರೀಕ್ಷೆಗಳನ್ನು ನಡೆಸಿ ಫಲಿತಾಂಶಗಳನ್ನು ಸಹ ಪ್ರಕಟಿಸಿರುವ ಕ್ರಮವನ್ನು ಶಿಕ್ಷಣ ಮಂಡಳಿ ಸಭೆಯು ಅನುಸಮರ್ಥಿಸಿತು. | |
| II.5 | ಚೈನಿಸ್ ಪ್ರೊಗ್ರಾಂನ M.S (IT) & M.S (SE) ಪದವಿ ಕೋರ್ಸ್‌ಗಳ 3 ಮತ್ತು 4ನೇ ಸೆಮಿಸ್ಟರ್‌ನ ಪರೀಕ್ಷೆಗಳನ್ನು ಅನ್‌ಲೈನ್ ಮುಖಾಂತರ ನಡೆಸಲು ಅನುಮತಿ ನೀಡಿರುವ ಬಗ್ಗೆ. | |
| ತೀರ್ಮಾನ | 2021-22ನೇ ಸಾಲಿನಲ್ಲಿ ಪ್ರವೇಶ ಪಡೆದಿರುವ ಚೈನಿಸ್ ವಿದ್ಯಾರ್ಥಿಗಳು ಪ್ರೋಗ್ರಾಂಗಳನ್ನು ವ್ಯಾಸಂಗ ಮಾಡುತ್ತಿದ್ದು, ಕೋವಿಡ್ ಕಾರಣದಿಂದಾಗಿ ತಮ್ಮ ದೇಶಕ್ಕೆ ತೆರಳಿದ್ದ ಹಿನ್ನೆಲೆಯಲ್ಲಿ, 3 ಮತ್ತು 4ನೇ ಸೆಮಿಸ್ಟರ್ ಪರೀಕ್ಷೆಗಳನ್ನು ನಡೆಸಿರುವುದಿಲ್ಲ. ಈ ಸಂಬಂಧ ಸದರಿ ಪರೀಕ್ಷೆಗಳನ್ನು ಆನ್‌ಲೈನ್ ಮುಖಾಂತರ ನಡೆಸಲು ಅನುಮತಿ ಕೋರಿ ಸಂಯೋಜಕರು, ಚೈನಿಸ್ ಪ್ರೋಗ್ರಾಂ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರು ಪತ್ರ ಮುಖೇನ ಕೋರಿರುತ್ತಾರೆ. ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ ಇದೊಂದು ವಿಶೇಷ ಸಂದರ್ಭವೆಂದು ಪರಿಗಣಿಸಿ ಮಾನ್ಯ ಕುಲಪತಿಗಳ ಅನುಮೋದನೆ ಮೇರೆಗೆ ಆನ್‌ಲೈನ್ ಮುಖಾಂತರ ಪರೀಕ್ಷೆಗಳನ್ನು ನಡೆಸಲು ಪರೀಕ್ಷಾ ಅಧಿಸೂಚನೆಯನ್ನು ಹೊರಡಿಸುವುದರೊಂದಿಗೆ 1 ಮತ್ತು 3ನೇ ಸೆಮಿಸ್ಟರ್‌ಗೂ ಸಹ ಆನ್‌ಲೈನ್ ಮೂಲಕವೇ ಪರೀಕ್ಷೆ ನಡೆಸಿರುವ ವಿಶ್ವವಿದ್ಯಾನಿಲಯದ ಕ್ರಮವನ್ನು ಶಿಕ್ಷಣ ಮಂಡಳಿ ಸಭೆಯು ಅನುಸಮರ್ಥಿಸಿತು. | |

| | | |
|---|---|---|
| II.6 | 2024-2025ನೇ ಆರ್ಥಿಕ ಸಾಲಿನ ಮೈಸೂರು ವಿಶ್ವವಿದ್ಯಾನಿಲಯದ ಆಯವ್ಯಯ ಅಂದಾಜುಗಳ "ಕರಡು" ಪಟ್ಟಿಯನ್ನು (ಅನುಬಂಧ-1) ವಿದ್ಯಾವಿಷಯಕ ಪರಿಷತ್ ಸಭೆಯ ಅನುಮೋದಗಾಗಿ. |
| | ಮಾನ್ಯ ಕುಲಪತಿಗಳು ಮಾತನಾಡಿ 2024-2025ನೇ ಆರ್ಥಿಕ ಸಾಲಿನ ಮೈಸೂರು ವಿಶ್ವವಿದ್ಯಾನಿಲಯದ ಆಯವ್ಯಯ ಅಂದಾಜುಗಳ "ಕರಡು" ಪಟ್ಟಿಯನ್ನು ಸಭೆಗೆ ಮಂಡಿಸುವಂತೆ ಹಣಕಾಸು ಅಧಿಕಾರಿಗಳಿಗೆ ಸೂಚಿಸಿದರು.<br><br>ಹಣಕಾಸು ಅಧಿಕಾರಿಗಳು 2024-2025ನೇ ಆರ್ಥಿಕ ಸಾಲಿನ ಮೈಸೂರು ವಿಶ್ವವಿದ್ಯಾನಿಲಯದ ಆಯವ್ಯಯ "ಕರಡು" ಅನ್ನು ಸಭೆಗೆ ಮಂಡಿಸಿದರು.<br><br>ಶ್ರೀ ಸಿ.ಎನ್. ಮಂಜೇಗೌಡ, ವಿಧಾನ ಪರಿಷತ್ ಸದಸ್ಯರು ಇವರು ಮಾತನಾಡಿ, ವಿಶ್ವವಿದ್ಯಾನಿಲಯ ಸ್ಕೂಲ್ ಆಫ್ ಇಂಜಿನಿಯರಿಂಗ್ ಶಾಲೆಯು ಸ್ವಯಂ ಆರ್ಥಿಕ ಯೋಜನೆಯಡಿ ನಡೆಯುತ್ತಿದೆ. 2024-25ನೇ ಸಾಲಿನ ಆಯವ್ಯಯ ಅಂದಾಜು ಪ್ರತಿಯಲ್ಲಿ ರೂ.10,03,00,000/-ಗಳ ಆದಾಯದ ಮೊತ್ತವೆಂದು ನಮೂದಿಸಲಾಗಿದೆ. ಇದು ಯಾವ ರೀತಿಯಲ್ಲಿ ಸಂಗ್ರಹವಾಗಿದೆ ಹಾಗೂ ಒಬ್ಬ ವಿದ್ಯಾರ್ಥಿಗೆ ಎಷ್ಟು ಪ್ರವೇಶಾತಿ ಶುಲ್ಕವನ್ನು ನಿಗದಿಗೊಳಸಲಾಗಿದೆ. ವಿಶ್ವವಿದ್ಯಾನಿಲಯ ಸ್ಕೂಲ್ ಆಫ್ ಇಂಜಿನಿಯರಿಂಗ್‌ನಲ್ಲಿ ಎಷ್ಟು ಸೀಟುಗಳನ್ನು ನಿಗದಿಪಡಿಸಲಾಗಿದೆ. ಸರ್ಕಾರವು ಹಂಚಿಕೆ ಮಾಡಿರುವ ಸೀಟುಗಳೆಷ್ಟು, ಪ್ರವೇಶಾತಿಯನ್ನು ಯಾವ ಮಾನದಂಡದ ಆಧಾರದ ಮೇಲೆ ಪ್ರವೇಶಾತಿ ಮಾಡಿಕೊಳ್ಳಲಾಗಿದೆ ಎಂದು ಮಾಹಿತಿ ನೀಡುವಂತೆ ತಿಳಿಸಿದರು.<br><br>ಹಣಕಾಸು ಅಧಿಕಾರಿಗಳು ಮಾತನಾಡಿ, ರೂ.10,03,00,000/- ಅಂದಾಜು ಮೊತ್ತವು ವಿದ್ಯಾರ್ಥಿಗಳ ಪ್ರವೇಶಾತಿ ಶುಲ್ಕವಾಗಿದೆ. ವಿಶ್ವವಿದ್ಯಾನಿಲಯ ಸ್ಕೂಲ್ ಆಫ್ ಇಂಜಿನಿಯರಿಂಗ್ ಕಾಲೇಜಿನಲ್ಲಿ ಐದು ಕೋರ್ಸುಗಳಿದ್ದು, ಒಂದೊಂದು ಕೋರ್ಸ್‌ಗೂ ಬೇರೆ ರೀತಿಯಲ್ಲಿ ಶುಲ್ಕವನ್ನು ನಿಗದಿಗೊಳಸಲಾಗಿದೆ ಹಾಗೂ Fee Structure ಮಾಹಿತಿಯು ಇಂಜಿನಿಯರಿಂಗ್ ಕಾಲೇಜಿನ ಕಛೇರಿಯಲ್ಲಿ ಲಭ್ಯವಿರುತ್ತದೆ ಎಂದು ತಿಳಿಸಿದರು.<br><br>ವಿಶ್ವವಿದ್ಯಾನಿಲಯ ಸ್ಕೂಲ್ ಆಫ್ ಇಂಜಿನಿಯರಿಂಗ್ ನಿಕಾಯದ ಡೀನರಾದ ಪ್ರೊ. ಎಸ್.ಜೆ. ಮಂಜುನಾಥ್ ಅವರು ಮಾತನಾಡಿ, 360 ಸೀಟುಗಳನ್ನು ನಿಗದಿಪಡಿಸಲಾಗಿದೆ. ಇದರಲ್ಲಿ 180 ಸರ್ಕಾರಿ ಸೀಟುಗಳಾಗಿದ್ದು, ಇನ್ನುಳಿದ 180 ಸೀಟುಗಳು ವಿಶ್ವವಿದ್ಯಾನಿಲಯದಾಗಿರುತ್ತದೆ. ಪ್ರತಿ ವಿದ್ಯಾರ್ಥಿಗೂ ರೂ.1,74,000/- ಗಳನ್ನು ಶುಲ್ಕವಾಗಿ ನಿಗದಿಗೊಳಸಲಾಗಿದೆ. ಸರ್ಕಾರದಿಂದ ಸಿಇಟಿ ಮುಖಾಂತರ ಹಾಗೂ ವಿಶ್ವವಿದ್ಯಾನಿಲಯದಲ್ಲಿ ಮೊದಲು ಬಂದವರಿಗೆ ಪ್ರಥಮ ಆದ್ಯತೆ ನೀಡುವ ಮೂಲಕ ಪ್ರವೇಶಾತಿಯನ್ನು ಮಾಡಿಕೊಳ್ಳಲಾಗುತ್ತದೆ ಎಂದು ತಿಳಿಸಿದರು.<br><br>ಮಾನ್ಯ ಕುಲಪತಿಗಳು ಮಾತನಾಡಿ, 2024-25ನೇ ಸಾಲಿನ ಆಯವ್ಯಯ ಅಂದಾಜು ಪ್ರತಿಯಲ್ಲಿ ತೋರಿಸಲಾಗಿರುವ ರೂ.10,03,00,000/- ಗಳ ಆದಾಯದ ಮೊತ್ತವು ಒಟ್ಟು ನಾಲ್ಕು ವರ್ಷಗಳ (1, 2, 3 ಮತ್ತು 4ನೇ ವರ್ಷಗಳ ವಿದ್ಯಾರ್ಥಿಗಳು) ವಿದ್ಯಾರ್ಥಿಗಳಿಂದ ಪಾವತಿಸಿಕೊಂಡಿರುವ ಪ್ರವೇಶಾತಿ ಶುಲ್ಕವಾಗಿರುತ್ತದೆ. ಈ ಮಾಹಿತಿಯು ಆಯವ್ಯಯದ ಪುಸ್ತಕದ 72ನೇ ಪುಟದಲ್ಲಿ ನಮೂದಿಸಲಾಗಿದೆ ಎಂದು ವಿವರಣೆ ನೀಡಿದರು.<br><br>ಶ್ರೀ ಸಿ.ಎನ್. ಮಂಜೇಗೌಡ, ವಿಧಾನ ಪರಿಷತ್ ಸದಸ್ಯರು ಇವರು ಮಾತನಾಡಿ, ಬಜೆಟ್‌ನಲ್ಲಿ ಕ್ಯಾಂಪಸ್ ನಿರ್ವಹಣೆಗೆಂದು 16 ಕೋಟಿ 50 ಲಕ್ಷ ರೂ.ಗಳನ್ನು ಮೀಸಲಿಡಲಾಗಿದೆ. ಆದರೆ, ಕ್ಯಾಂಪಸ್‌ನಲ್ಲಿ ಶುಚಿತ್ವದ ಕೊರತೆ ಎದ್ದು ಕಾಣುತ್ತಿದೆ. ರಾಷ್ಟ್ರಕವಿ ಕುವೆಂಪು ಅಂತಹ ಮಹಾನ್ ವ್ಯಕ್ತಿಗಳು ಕುಲಪತಿಗಳಾಗಿದ್ದ ಈ ಮೈಸೂರು |

| | |
|---|---|
| | ವಿಶ್ವವಿದ್ಯಾನಿಲಯದ ಮಾನಸಗಂಗೋತ್ರಿಗೆ ಒಂದು ಉತ್ತಮ ಹೆಸರಿದೆ. ವಾಕಿಂಗ್‌ಗೆ ಹೋಗುವಾಗ ಗಮನಿಸಿದರೆ ಆಹಾರ ಸೇವಿಸಿದ ಪೊಟ್ಟಣಗಳು, ಪ್ಲಾಸ್ಟಿಕ್ ನೀರಿನ ಬಾಟಲ್‌ಗಳು ಎಲ್ಲೆಂದರಲ್ಲಿ ಬಿದ್ದಿರುತ್ತದೆ. ಇವುಗಳ ಬಗ್ಗೆ ಏನು ಕ್ರಮಕೈಗೊಳ್ಳಲಾಗಿದೆ ಎಂದು ಸಭೆಯಲ್ಲಿ ಪ್ರಸ್ತಾಪಿಸಿದರು. ವಿದ್ಯುಚ್ಛಕ್ತಿ ಬಿಲ್ ಅಂದಾಜು 35 ಲಕ್ಷಗಳು ಎಂದು ನಮೂದಿಸಲಾಗಿದೆ. ಆದರೆ ಬೆಳಗ್ಗೆ 9.00 ಗಂಟೆಯಾದರೂ ದೊಡ್ಡ ದೊಡ್ಡ ಲೈಟ್‌ಗಳು ಆನ್ ಆಗಿರುತ್ತದೆ. ಇವುಗಳನ್ನೆಲ್ಲಾ ಯಾರು ನಿರ್ವಹಣೆ ಮಾಡುತ್ತಾರೆ. ವಿಶ್ವವಿದ್ಯಾನಿಲಯದ ಶಿಕ್ಷಣದ ಸ್ಥಳವು ದೇಗುಲವಿದ್ದಂತೆ, ದೇಗುಲದಲ್ಲಿ ಸ್ವಚ್ಛತಾ ನಿರ್ವಹಣೆ ಮುಖ್ಯವಾಗಿರುತ್ತದೆ. ಆದ್ದರಿಂದ ಸ್ವಚ್ಛತಾ ನಿರ್ವಹಣೆಗೆ ಗಮನಹರಿಸಬೇಕೆಂದು ಸಲಹೆ ನೀಡಿದರು.<br><br>ಮಾನ್ಯ ಕುಲಪತಿಗಳು ಮಾತನಾಡಿ, ಇತ್ತೀಚೆಗೆ ವಿಶ್ವವಿದ್ಯಾನಿಲಯದ ರಾಷ್ಟ್ರೀಯ ಸೇವಾ ಯೋಜನೆಯ ವತಿಯಿಂದ ಹತ್ತು ದಿನಗಳ ಸ್ವಚ್ಛತಾ ಕಾರ್ಯಕ್ರಮವನ್ನು ಏರ್ಪಡಿಸಿದ್ದು, ಕ್ಯಾಂಪಸ್‌ನ್ನು ಸ್ವಚ್ಛಗೊಳಿಸಲಾಯಿತು. ಅದರಂತೆ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಸ್ವಚ್ಛತಾ ಸಿಬ್ಬಂದಿಗಳು ಪ್ರತಿನಿತ್ಯ ಸ್ವಚ್ಛಗೊಳಿಸುತ್ತಾರೆ. ಕ್ಯಾಂಪಸ್ ಅತಿ ವಿಶಾಲವಾಗಿದ್ದು, ಪ್ರತಿದಿನ ಗಮನಿಸಲೂ ಸಾಧ್ಯವಾಗುವುದಿಲ್ಲ. ಆದರೂ ವಿಭಾಗಗಳಿಗೆ ಬೆಳಗ್ಗೆ ಭೇಟಿ ನೀಡುವ ಸಂದರ್ಭದಲ್ಲಿ ಪ್ರತಿನಿತ್ಯ ಪ್ಲಾಸ್ಟಿಕ್ ಬಾಟಲ್‌ಗಳು ಕಸದ ತ್ಯಾಜ್ಯಗಳು ಕಂಡುಬರುತ್ತಿದ್ದು, ಇನ್ನು ಹೆಚ್ಚಿನ ಮಟ್ಟದಲ್ಲಿ ಸ್ವಚ್ಛತಾ ನಿರ್ವಹಣೆಗೆ ಗಮನಹರಿಸಲಾಗುವುದೆಂದು ತಿಳಿಸಿದರು. ಜೊತೆಗೆ ಕ್ಯಾಂಪಸ್ ನಿರ್ವಹಣೆಯೆಂದರೆ ಮಾನಸಗಂಗೋತ್ರಿಯೊಂದಿಗೆ ಕ್ರಾಫರ್ಡ್ ಹಾಲ್ ಮತ್ತು ಯುವರಾಜ/ಮಹಾರಾಜ ಕಾಲೇಜು ಆವರಣ, ಅತಿಥಿಗೃಹ, ವಸತಿಗೃಹಗಳು, ಕುಕ್ಕರಹಳ್ಳಿಕೆರೆ/ ತೋಟಗಾರಿಕೆ/ ಭದ್ರತಾ ಸಿಬ್ಬಂದಿಗಳ ನಿರ್ವಹಣೆ, ನೀರಿನ ಶುಲ್ಕ, ದೂರವಾಣಿ ಶುಲ್ಕ, ವಿದ್ಯುಚ್ಛಕ್ತಿ ಶುಲ್ಕಗಳು, ಮೈನರ್ ರಿಪೇರಿಗಳು ಮತ್ತು ವಿಶ್ವವಿದ್ಯಾನಿಲಯದ ಪ್ರತಿ ಕಟ್ಟಡಗಳ ನಿರ್ವಹಣೆ, ಸಫಾಯಿ ಕರ್ಮಚಾರಿಗಳ ವೇತನ ಸಹ ಒಳಗೊಂಡಿರುತ್ತದೆ ಎಂದು ಸಭೆಗೆ ತಿಳಿಸಿದರು.<br><br>ಪ್ರೊ. ಎಂ.ಜಿ. ಮಂಜುನಾಥ ಅವರು ಮಾತನಾಡಿ, ಆದಾಯದ ಕೊರತೆಯನ್ನು ನಮೂದಿಸುವುದರೊಂದಿಗೆ, ಅಂತರಿಕ ಆದಾಯವನ್ನು ಕ್ರೋಢಿಕರಿಸಲು ಮತ್ತು ವೆಚ್ಚಗಳಲ್ಲಿ ಮಿತವ್ಯಯ ಸಾಧಿಸಲು ಸೂಕ್ತ ಕ್ರಮ ಕೈಗೊಳ್ಳಲಾಗುವುದು ಎಂದು ನಮೂದಿಸಿರುವುದು ಸಂತೋಷದಾಯಕವಾಗಿದೆ. ಪಿಂಚಣಿ ಖಾತೆಯ ಕಾರ್ಪಸ್ ನಿಧಿಯನ್ನು ವರ್ಗಾಯಿಸಿಕೊಂಡು ಕೊರತೆಯನ್ನು ನೀಗಿಸಲಾಗುವುದು ಎಂದು ಹೇಳಿದ್ದೀರಿ. ದಯವಿಟ್ಟು ಪಿಂಚಣಿ ಖಾತೆಯಿಂದ ಹಣವನ್ನು ತೆಗೆಯಬೇಡಿ ಮತ್ತು ಪಿಂಚಣಿ ಖಾತೆಯಿಂದ ಹಣವನ್ನು ತೆಗೆಯುವುದು ಅಪರಾಧವೆಂದು ಸಭೆಗೆ ತಿಳಿಸಿದರು.<br><br>ಹಣಕಾಸು ಅಧಿಕಾರಿಗಳು ಮಾತನಾಡಿ, ಪಿಂಚಣಿ ಖಾತೆಯ ಅನುದಾನವನ್ನು ಪಿಂಚಣಿಗೆ ಮಾತ್ರ ಬಳಸಲಾಗುತ್ತದೆ ಎಂದರು.<br><br>ಪ್ರೊ. ಎಂ.ಜಿ.ಮಂಜುನಾಥ ಅವರು ಪಿಂಚಣಿಗೆ ಮಾತ್ರ ಬಳಸುವುದಾದರೆ ಆಭ್ಯಂತರವಿಲ್ಲ. ಪಿಂಚಣಿಗೆ ಹೊರತುಪಡಿಸಿ ಇನ್ಯಾವುದೇ ಕಾರಣಕ್ಕೂ ಬಳಸಬಾರದೆಂದು ಮನವಿ ಮಾಡಿದರು.<br><br>ಮಾನ್ಯ ಕುಲಪತಿಗಳು ಮಾತನಾಡಿ, ಪಿಂಚಣಿ ಖಾತೆಯ ಅನುದಾನವನ್ನು ಪಿಂಚಣಿಗೆ ಮಾತ್ರ ಬಳಸಲಾಗುತ್ತಿದೆ. ವರ್ಷಕ್ಕೆ 120 ಕೋಟಿ ರೂ.ಗಳು ಬೇಕಾಗುತ್ತದೆ. ಸರ್ಕಾರವು 50 ಕೋಟಿ ರೂ.ಗಳನ್ನು ಮಾತ್ರ ಬಿಡುಗಡೆ ಮಾಡಿದೆ. ಆ ಕಾರಣದಿಂದಾಗಿ ಪಿಂಚಣಿದಾರರಿಗೆ ತೊಂದರೆಯಾಗಬಾರದೆಂಬ ದೃಷ್ಟಿಯಿಂದ ಪಿಂಚಣಿಗೆ ಮಾತ್ರ ಉಪಯೋಗಿಸಲಾಗುತ್ತಿದೆ ಎಂದು ಸ್ಪಷ್ಟನೆ ನೀಡಿದರು. |

| | |
|---|---|
| | ಪ್ರೊ. ಡಿ. ಆನಂದ್ ಅವರು ಮಾತನಾಡಿ, ಮೈಸೂರು ವಿಶ್ವವಿದ್ಯಾನಿಲಯವು ರಾಜ್ಯದ ಅತ್ಯಂತ ಹಳೆಯ ವಿಶ್ವವಿದ್ಯಾನಿಲಯವಾಗಿದೆ. ಮೈಸೂರು ವಿಶ್ವವಿದ್ಯಾನಿಲಯದಲ್ಲಿ 1852 ಮಂದಿ ಪಿಂಚಣಿದಾರರಿದ್ದಾರೆ. ಪ್ರತಿ ವರ್ಷವೂ 30-50 ಮಂದಿ ವಯೋನಿವೃತ್ತಿ ಹೊಂದುವುದರಿಂದ, ಈ ಸಂಖ್ಯೆಯು ಇನ್ನು ಹೆಚ್ಚಾಗುತ್ತದೆ. ಸರ್ಕಾರದಿಂದ ಬರುವ ಸಹಾಯದಾನವನ್ನು ನಿರೀಕ್ಷಿಸಿ ಪಿಂಚಣಿ ಖಾತೆಯಲ್ಲಿರುವ ಹಣವನ್ನು ಬಳಸುವುದರಿಂದ ಆಗಾಗ್ಗೆ ಗೊಂದಲವಾಗುತ್ತಿದೆ. ಜನ ಪ್ರತಿನಿಧಿಯಾದ ತಾವು ಸರ್ಕಾರದ ಹಂತದಲ್ಲಿ ಉದ್ಯೋಗಿಗಳಿಗೆ ಹೆಚ್.ಆರ್.ಎಂ.ಎಸ್ ಮುಖಾಂತರ ವೇತನ ನೀಡುವ ರೀತಿಯಲ್ಲಿ ನಿವೃತ್ತ ನೌಕರರುಗಳಿಗೆ ಪಿಂಚಣಿಯನ್ನು ಹೆಚ್.ಆರ್.ಎಂ.ಎಸ್ ಮುಖಾಂತರ ನೀಡುವಂತೆ ಮಾಡಬೇಕು. ಏಕೆಂದರೆ ಹಲವು ಪಿಂಚಣಿದಾರರು ಪಿಂಚಣಿ ಖಾತೆಯಿಂದ ಹಣ ಡ್ರಾ ಮಾಡಲಾಗಿದೆ. ಮುಂದಿನ ದಿನದಲ್ಲಿ ನಮ್ಮ ಭವಿಷ್ಯವೇನು ಎಂಬುದರ ಬಗ್ಗೆ ಒಂದು ರೀತಿಯ ಗೊಂದಲದೊಂದಿಗೆ ಅನೇಕರಲ್ಲಿ ಪ್ರಶ್ನೆಗಳು ಮೂಡಿರುತ್ತವೆ. ಈ ವ್ಯವಸ್ಥೆಯು ರಾಜ್ಯದಾದ್ಯಂತ ಆಗಬೇಕಾಗಿರುವ ಸುಧಾರಣೆಯಾಗಿದೆ. ಇಂತಹ ಸುಧಾರಣೆಯನ್ನು ಸರ್ಕಾರವು ಕಾರ್ಯಗತಗೊಳಿಸಿದರೆ, ವಿಶ್ವವಿದ್ಯಾನಿಲಯಗಳು ಶೈಕ್ಷಣಿಕ ಕಾರ್ಯಗಳ ಬಗ್ಗೆ ಹೆಚ್ಚಿನ ಗಮನಹರಿಸಿ ಕಾರ್ಯನಿರ್ವಹಿಸುತ್ತವೆ. ನಿವೃತ್ತ ನೌಕರರುಗಳು ವಿಶ್ವವಿದ್ಯಾನಿಲಯದ ಆಸ್ತಿ. ಇಂದಿನ ದಿನಗಳಲ್ಲಿ ಪಿಂಚಣಿ ಬಗ್ಗೆ ಪಿಂಚಣಿದಾರರುಗಳಿಗೆ ಹಲವಾರು ಗೊಂದಲವಿದೆ. ಇಂತಹ ವಾತಾವರಣವನ್ನು ಹೋಗಲಾಡಿಸಬೇಕಾದರೆ ಸರ್ಕಾರದ ಮಟ್ಟದಲ್ಲಿ ಇದಕ್ಕೊಂದು ಆರ್ಥಿಕ ಸುಧಾರಣೆ ಕ್ರಮವನ್ನು ಕೈಗೊಳ್ಳಬೇಕೆಂದು ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಶ್ರೀ ಸಿ.ಎನ್.ಮಂಜೇಗೌಡರವರಲ್ಲಿ ಎಲ್ಲ ಅಧ್ಯಾಪಕರುಗಳ ಪರವಾಗಿ ಮನವಿ ಮಾಡಿಕೊಂಡರು.<br><br>ಪ್ರೊ. ಎಂ.ಜಿ.ಮಂಜುನಾಥ ಅವರು ಮಾತನಾಡಿ, ಪ್ರೊ. ಡಿ.ಆನಂದ್ ಅವರ ಮನವಿಯನ್ನು ಪರಿಗಣಿಸಿ, ಪಿಂಚಣಿ ವ್ಯವಸ್ಥೆಯನ್ನು ಹೆಚ್.ಆರ್.ಎಂ.ಎಸ್ ಮುಖಾಂತರ ನೀಡುವಂತೆ ಮಾಡುವುದರಿಂದ, ಶ್ರೀ ಸಿ.ಎನ್. ಮಂಜೇಗೌಡ ಅವರ ಹೆಸರು ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಶಾಶ್ವತವಾಗಿ ಉಳಿಯುತ್ತದೆ. ದಯವಿಟ್ಟು ಈ ಒಂದು ವ್ಯವಸ್ಥೆಗೆ ಸಹಾಯ ಮಾಡಬೇಕೆಂದು ಒತ್ತಾಯಿಸಿದರು.<br><br>ಶ್ರೀ ಸಿ.ಎನ್. ಮಂಜೇಗೌಡ, ವಿಧಾನ ಪರಿಷತ್ ಸದಸ್ಯರು ಮಾತನಾಡಿ, ಈ ಸಂಬಂಧ ವಿಶ್ವವಿದ್ಯಾನಿಲಯದಿಂದ ಸರ್ಕಾರಕ್ಕೆ ಮನವಿಯನ್ನು ಸಲ್ಲಿಸಿರುವ ಮನವಿಯ ಒಂದು ಪ್ರತಿಯನ್ನು ನೀಡಿದ್ದಲ್ಲಿ, ಸದರಿ ವಿಷಯದ ಕುರಿತು ಸದನದಲ್ಲಿ ಚರ್ಚಿಸುವುದಾಗಿ ತಿಳಿಸಿದರು.<br><br>ಸರ್ಕಾರಿ ಸ್ವಾಮ್ಯದ ಕಛೇರಿಗಳಲ್ಲಿ ಕರ್ತವ್ಯ ನಿರ್ವಹಿಸುವಾಗ ಉದ್ಯೋಗಿಗಳಿಗೆ ನಿಯಮಾನುಸಾರ ಪಿಂಚಣಿ ನೀಡಿದ್ದಲ್ಲಿ, ಸದರಿ ನಿವೃತ್ತ ಉದ್ಯೋಗಿಗಳ ಭವಿಷ್ಯದಲ್ಲಿ ಒಂದು ಆರ್ಥಿಕ ಭದ್ರತೆಯನ್ನು ಒದಗಿಸುವಂತಾಗುತ್ತದೆಂದು ತಿಳಿಸುತ್ತಾ, ಮೊದಲು ಅನಗತ್ಯವಾಗಿ ಸೋರಿಕೆಯಾಗುತ್ತಿರುವ ಅನುದಾನವನ್ನು ತಡೆಗಟ್ಟಬೇಕೆಂದು ತಿಳಿಸಿದರು.<br><br>ಶ್ರೀ ಸಿ.ಎನ್. ಮಂಜೇಗೌಡ, ವಿಧಾನ ಪರಿಷತ್ ಸದಸ್ಯರು ಇವರು ಮಾತನಾಡಿ, ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಸುಮಾರು ವರ್ಷಗಳಿಂದ ಸಾಕಷ್ಟು ನೇಮಕಾತಿ ಮಾಡಿಕೊಳ್ಳಲಾಗಿದೆ. ಹಲವಾರು ಬಾರಿ ವಿಶ್ವವಿದ್ಯಾನಿಲಯದ ವಿಭಾಗ/ಕಛೇರಿಗಳಿಗೆ ಭೇಟಿ ನೀಡಿದ್ದ ಸಂದರ್ಭದಲ್ಲಿ ವಿದ್ಯಾರ್ಥಿಗಳ ಸಂಖ್ಯೆಗಿಂತ ಉದ್ಯೋಗಿಗಳ ಸಂಖ್ಯೆ ಹೆಚ್ಚಾಗಿರುತ್ತದೆ. ಖಾಯಂ ಉದ್ಯೋಗಿಗಳಿಗೆ ಹೆಚ್.ಆರ್.ಎಂ.ಎಸ್ ಮುಖಾಂತರ ಸರ್ಕಾರ ವೇತನ ಪಾವತಿಸುತ್ತಿದೆ. ಆದರೆ, ತಾತ್ಕಾಲಿಕ ಉದ್ಯೋಗಿಗಳಿಗೆ ಯಾವ ಅನುದಾನದಿಂದ ವೇತನ ಪಾವತಿಸಲಾಗುತ್ತದೆ? ಪ್ರಸ್ತುತವಿರುವ ಆಂತರಿಕ |

ಸಂಪನ್ಮೂಲವನ್ನು ಕ್ರೋಢೀಕರಿಸಿಕೊಂಡು ಅಭಿವೃದ್ಧಿಪಡಿಸಿಕೊಳ್ಳಬೇಕು. ಅವಶ್ಯಕ್ಕಿಂತ ಹೆಚ್ಚಿನ ನೇಮಕ ಮಾಡಿರುವ ಉದ್ದೇಶವೇನು? ಹೆಚ್ಚುವರಿ ನೇಮಕಾತಿಯನ್ನು ಏಕೆ ಮಾಡಿಕೊಳ್ಳಬೇಕು ಎಂದು ಪ್ರಶ್ನಿಸುತ್ತಾ, ವಿಶ್ವವಿದ್ಯಾನಿಲಯದ ಹಿತದೃಷ್ಟಿಯಿಂದ ಯಾರೇ ಕುಲಪತಿಗಳು ನೇಮಕಾತಿ ಮಾಡಿರಬಹುದು. ಆದರೆ, ಅವರುಗಳನ್ನು ಮುಂದುವರೆಸಬೇಕೆಂಬುದು ನಿಯಮದಲ್ಲಿರುವುದಿಲ್ಲ. ವಿಶ್ವವಿದ್ಯಾನಿಲಯವು ಮಾಹೆಯಾನ ತಾತ್ಕಾಲಿಕ ಬೋಧಕೇತರ ಉದ್ಯೋಗಿಗಳಿಗೆ ನೀಡುತ್ತಿರುವ ವೇತನದ ಮೊತ್ತವೆಷ್ಟು? ಮಾಹೆಯಾನ ತಾತ್ಕಾಲಿಕ ಬೋಧಕೇತರ ಉದ್ಯೋಗಿಗಳಿಗೆ ರೂ. 2.50 ಕೋಟಿಗಳು ಬೇಕಾದರೆ, ವರ್ಷಕ್ಕೆ ಅಂದಾಜು 25 ಕೋಟಿಗಳಿಗೂ ಹೆಚ್ಚಿನ ಅನುದಾನ ಬೇಕಾಗುತ್ತದೆ. ವರ್ಷಕ್ಕೆ 120 ಕೋಟಿ ರೂ.ಗಳು ಪಿಂಚಣಿಗೆ ವೆಚ್ಚವಾಗುತ್ತದೆ. ಅವಶ್ಯಕತೆಗನುಸಾರ ತಾತ್ಕಾಲಿಕ ಉದ್ಯೋಗಿಗಳನ್ನು ಹೊರತುಪಡಿಸಿ, ಹೆಚ್ಚುವರಿ ತಾತ್ಕಾಲಿಕ ಉದ್ಯೋಗಿಗಳಿಗೆ ಹೆಚ್ಚುವರಿಯಾಗಿ ಶೇ.25ರಷ್ಟು ವೇತನವನ್ನು ಪಾವತಿಸಲಾಗುತ್ತಿದೆ. ಇದನ್ನು ಯಾವಾಗ ಸರಿಪಡಿಸಲಾಗುವುದೆಂದು ತಿಳಿಸಬೇಕು. ಈಗ ಹೆಚ್.ಆರ್.ಎಂ.ಎಸ್ ಮುಖಾಂತರ ಪಿಂಚಣಿ ವ್ಯವಸ್ಥೆಯಾಗಬೇಕೆಂದು ಕೋರಿರುವುದನ್ನು ಒಪ್ಪಿಕೊಂಡು ಸದನದಲ್ಲಿ ಮಂಡಿಸಬಹುದು. ಅದೇ ರೀತಿ ಈ ವಿಷಯವನ್ನು ಸಹ ಮಂಡಿಸಬೇಕಾಗುತ್ತದೆ. ಏಕೆಂದರೆ ಹೆಚ್ಚುವರಿಯಾಗಿ ಪೋಲಾಗುತ್ತಿರುವ ಹಣವನ್ನು ಸರಿದೂಗಿಸುವುದು ವಿಶ್ವವಿದ್ಯಾನಿಲಯದ ಆದ್ಯತೆಯಾಗಬೇಕು. ಇದನ್ನು ಮುಂದಿನ ಆಯವ್ಯಯದಲ್ಲಿ ಸರಿಪಡಿಸಬೇಕೆಂದು ತಿಳಿಸುತ್ತಾ, ತಾತ್ಕಾಲಿಕ ಉದ್ಯೋಗಿಗಳನ್ನು ನೇಮಕಾತಿ ಮಾಡಿಕೊಳ್ಳುವಾಗ ಸರ್ಕಾರದ ಸುತ್ತೋಲೆಯಿರುವುದಿಲ್ಲ. ಹಾಗೆಯೇ ತಾತ್ಕಾಲಿಕ ಉದ್ಯೋಗಿಗಳನ್ನು ಕಡಿತಗೊಳಿಸಲು ಸರ್ಕಾರದ ಸುತ್ತೋಲೆ ಅವಶ್ಯವಿರುವುದಿಲ್ಲ. ಈ ಬಗ್ಗೆ ನಿರ್ಣಯವನ್ನು ತೆಗೆದುಕೊಳ್ಳುವುದು ವಿಶ್ವವಿದ್ಯಾನಿಲಯದ ಜವಾಬ್ದಾರಿಯಾಗಿರುತ್ತದೆ. ಮೈಸೂರು ವಿಶ್ವವಿದ್ಯಾನಿಲಯವು ರಾಷ್ಟ್ರದಲ್ಲಿ ಪ್ರತಿಷ್ಠಿತ ವಿಶ್ವವಿದ್ಯಾನಿಲಯವಾಗಿದ್ದು, ಈ ವಿಶ್ವವಿದ್ಯಾನಿಲಯದ ಪದವಿ ಮತ್ತು ಪ್ರಮಾಣಪತ್ರಕ್ಕೆ ರಾಜ್ಯದಲ್ಲಿ ಅಲ್ಲದೆ ಪ್ರಪಂಚದಾದ್ಯಂತ ಮೌಲ್ಯವಿದೆ. ಇಂತಹ ವಿಶ್ವವಿದ್ಯಾನಿಲಯದಲ್ಲಿ ಅವ್ಯವಸ್ಥೆ ಸೂಕ್ತವಲ್ಲ. ಆಯವ್ಯಯ ವರದಿಯಲ್ಲಿ ವಿಶ್ವವಿದ್ಯಾನಿಲಯವು ಪ್ರಸ್ತುತ 80.35 ಕೋಟಿ ರೂ.ಗಳ ಕೊರತೆಯನ್ನು ಎದುರಿಸುತ್ತಿದೆ. ಹೆಚ್ಚುವರಿಯಾಗಿರುವ ಶೇ.25 ರಷ್ಟು ತಾತ್ಕಾಲಿಕ ಉದ್ಯೋಗಿಗಳನ್ನು ಕಡಿತಗೊಳಿಸುವುದರಿಂದ, ಅವರುಗಳಿಗೆ ಪಾವತಿಸುತ್ತಿದ್ದ ವೇತನವನ್ನು ಕೊರತೆಯಿರುವ ಬಜೆಟ್‌ಗೆ ಸೇರಿಸಬಹುದು. ಕುಲಸಚಿವರು ತಿಳಿಸಿರುವಂತೆ ಶೇ.70 ರಷ್ಟು ಖಾಲಿಯಿರುವ ಹುದ್ದೆಗಳಿಗೆ ಮಾತ್ರ ನೇಮಕಾತಿ ಮಾಡಿಕೊಳ್ಳಬೇಕು. ಒಂದು ವೇಳೆ ಶಿಫಾರಸ್ಸು ಪರಿಗಣಿಸುವುದಾದರೆ ಕೇವಲ 5% ರಷ್ಟು ಮಾತ್ರ ನೇಮಕಾತಿ ಮಾಡಿಕೊಳ್ಳಿ. ಸಾವಿರದ ಇನ್ನೂರಕ್ಕೂ ಹೆಚ್ಚಿರುವ ಮಂದಿ ತಾತ್ಕಾಲಿಕ ಉದ್ಯೋಗಿಗಳಿಗೆ ವಿಶ್ವವಿದ್ಯಾನಿಲಯವು ತನ್ನ ಆಂತರಿಕ ಸಂಪನ್ಮೂಲದಿಂದ ವೇತನವನ್ನು ಪಾವತಿಸುತ್ತಿರುವುದರಿಂದ ವಿಶ್ವವಿದ್ಯಾನಿಲಯಕ್ಕೆ ಆದಾಯ ಬರುವ ಮೂಲವೆಂದರೆ ವಿದ್ಯಾರ್ಥಿಗಳು ಪಾವತಿಸುವ ಶುಲ್ಕಗಳು. ಎಷ್ಟೋ ವಿದ್ಯಾರ್ಥಿಗಳಿಗೆ ಶುಲ್ಕ ಪಾವತಿಸಲು ತುಂಬಾ ಕಷ್ಟವಿರುತ್ತದೆ. ಆ ಹಣವನ್ನು ಖರ್ಚು ಮಾಡುತ್ತಿರುವುದು ಎಷ್ಟರಮಟ್ಟಿಗೆ ಸರಿಯಾಗಿದೆ. ಆದ್ದರಿಂದ, ಅನಾವಶ್ಯಕವಾಗಿ ಸೋರಿಕೆಯಾಗುತ್ತಿರುವ ಅನುದಾನವನ್ನು ತಡೆಗಟ್ಟಿ, ವಿಶ್ವವಿದ್ಯಾನಿಲಯದ ಆರ್ಥಿಕ ಸುಧಾರಣೆ ಮಾಡಬೇಕೆಂದು ತಿಳಿಸಿದರು.

ಮಾನ್ಯ ಕುಲಸಚಿವರು ಮಾತನಾಡಿ, ಮಾಹೆಯಾನ ತಾತ್ಕಾಲಿಕ ಉದ್ಯೋಗಿಗಳ ವೇತನಕ್ಕೆ 2.50 ಕೋಟಿ ರೂ.ಗಳು ವೆಚ್ಚವಾಗುತ್ತಿದೆ. ಕಳೆದ ಎರಡು ವರ್ಷಗಳಿಂದ ಯಾವುದೇ ತಾತ್ಕಾಲಿಕ ಬೋಧಕೇತರ ಸಿಬ್ಬಂದಿಗಳ ನೇಮಕಾತಿ ಆಗಿರುವುದಿಲ್ಲ. ಈ ರೀತಿಯ ನೇಮಕಾತಿಯನ್ನು 2001 ರಿಂದಲೂ ಮಾಡಲಾಗಿದೆ. ಈ ಸಿಬ್ಬಂದಿ ವರ್ಗದವರುಗಳ ನೇಮಕಾತಿಯು ಹೆಚ್ಚಾಗಿರುವುದು 2010ರ ನಂತರವಾಗಿದ್ದು, ಕಳೆದ

| | |
|---|---|
| | 5-6 ವರ್ಷಗಳ ಹಿಂದೆ ತುಂಬಾ ತಾತ್ಕಾಲಿಕ ನೇಮಕಾತಿ ಮಾಡಿಕೊಳ್ಳಲಾಗಿದೆ. 2021 ರಿಂದ ಯಾವುದೇ ತಾತ್ಕಾಲಿಕ ನೇಮಕಾತಿಯನ್ನು ಮಾಡಿರುವುದಿಲ್ಲ. ಪ್ರಸ್ತುತ 1200 ಸಂಖ್ಯೆಗೂ ಮೀರಿ ತಾತ್ಕಾಲಿಕ ಉದ್ಯೋಗಿಗಳಿದ್ದಾರೆ. ಮೈಸೂರು ವಿಶ್ವವಿದ್ಯಾನಿಲಯವು ಸರ್ಕಾರದ ಆದೇಶದಂತೆ ಹಾಸನ, ಮಂಡ್ಯ ಮತ್ತು ಚಾಮರಾಜನಗರಗಳು ಪ್ರತ್ಯೇಕ ವಿಶ್ವವಿದ್ಯಾನಿಲಯಗಳಾಗಿವೆ. ಪ್ರಸ್ತುತ ವಿವಿ ಸ್ನಾತಕೋತ್ತರ ಕೇಂದ್ರಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದ ತಾತ್ಕಾಲಿಕ/ಖಾಯಂ ಉದ್ಯೋಗಿಗಳನ್ನು ಆಯಾ ವ್ಯಾಪ್ತಿಗೊಳಪಡುವ ವಿಶ್ವವಿದ್ಯಾನಿಲಯಗಳಲ್ಲಿಯೇ ಮುಂದುವರೆಸಲಾಗಿದೆ. ಆದರೂ ಮೈಸೂರು ವಿಶ್ವವಿದ್ಯಾನಿಲಯದಲ್ಲಿ 1136 ತಾತ್ಕಾಲಿಕ ಉದ್ಯೋಗಿಗಳಿದ್ದಾರೆ. ಈ ಸಂಬಂಧ ಸರ್ಕಾರದ ಸೂಚನೆಯನ್ವಯ ತಾತ್ಕಾಲಿಕ ಉದ್ಯೋಗಿಗಳ ಸಂಖ್ಯೆಯನ್ನು ತರ್ಕಬದ್ಧಗೊಳಿಸಲು ವಿಶ್ರಾಂತ ಕುಲಪತಿಗಳಾದ ಪ್ರೊ. ಅಂಬಳಿಕೆ ಹಿರಿಯಣ್ಣ ಅವರ ಅಧ್ಯಕ್ಷತೆಯಲ್ಲಿ, ನಿವೃತ್ತ ಐ.ಎ.ಎಸ್ ಅಧಿಕಾರಿ ಶ್ರೀ ಬಿ.ರಾಮು, ಕರ್ನಾಟಕ ರಾಜ್ಯ ಲೆಕ್ಕಪತ್ರ ಇಲಾಖೆ ನಿವೃತ್ತ ಜಂಟಿ ನಿಬಂಧಕ ಶ್ರೀ ರಾಮಚಂದ್ರಸ್ವಾಮಿ ಮತ್ತು ವಿಶ್ವವಿದ್ಯಾನಿಲಯದ ಉಪಕುಲಸಚಿವರು ಸಂಚಾಲಕರಾಗಿ ಸಮಿತಿಯನ್ನು ರಚಿಸಲಾಗಿತ್ತು. ಸದರಿ ಸಮಿತಿಯು ವಿಶ್ವವಿದ್ಯಾನಿಲಯಕ್ಕೆ ವರದಿಯನ್ನು ಸಲ್ಲಿಸಿದ್ದು, ವರದಿಯ ಆಧಾರದ ಮೇಲೆ ಮುಂದಿನ ಕ್ರಮಕೈಗೊಳ್ಳಲಾಗುವುದೆಂದು ತಿಳಿಸಿದರು. ಮುಂದುವರೆದು, ಮೈಸೂರು ವಿಶ್ವವಿದ್ಯಾನಿಲಯವು ಪರಂಪರೆಯುಳ್ಳ ಹಳೆಯ ವಿಶ್ವವಿದ್ಯಾನಿಲಯವಾಗಿದ್ದು, ಇಲ್ಲಿ ಒಟ್ಟು 1349 ಖಾಯಂ ಹುದ್ದೆಗಳು ಮಂಜೂರಾಗಿದ್ದು, ಸದರಿ ಉದ್ಯೋಗಿಗಳ ಪೈಕಿ 400 ಹುದ್ದೆಗಳಲ್ಲಿ ಮಾತ್ರ ಖಾಯಂ ಬೋಧಕೇತರ ಸಿಬ್ಬಂದಿ ಕಾರ್ಯನಿರ್ವಹಿಸುತ್ತಿದ್ದಾರೆ. ಇದರಲ್ಲಿ ಶೇ.70ರಷ್ಟು ಹುದ್ದೆಗಳು ಖಾಲಿಯಿದ್ದು, ಖಾಲಿ ಹುದ್ದೆಗೆ ಎದುರಾಗಿ ಕಾಲಕಾಲಕ್ಕೆ ಅವಶ್ಯಕತೆಗನುಸಾರ ಲ್ಯಾಬ್‌ನಲ್ಲಿ/ತೋಟಗಾರಿಕ ವಿಭಾಗ/ಕಛೇರಿ ಹಾಗೂ ಕೇಂದ್ರಗಳಲ್ಲಿ ಕಾರ್ಯನಿರ್ವಹಿಸುವ ಬೋಧಕೇತರ/ಸಂಶೋಧನಾ ಸಹಾಯಕರು/ ಕ್ಷೇತ್ರ ಸಹಾಯಕರು/ಸೇವಕರು ಹಾಗೂ ಪರಿಚಾರಕರು ಹುದ್ದೆಗಳಲ್ಲಿ ನೇಮಕಾತಿ ಮಾಡಲಾಗಿದೆ. ಅದರ ಸಂಖ್ಯೆಯನ್ನು ಮಿತಿಗೊಳಿಸಬೇಕಿತ್ತು. ಮಿತಿಗೊಳಿಸದಿದ್ದ ಕಾರಣದಿಂದ ತರ್ಕಬದ್ಧಗೊಳಿಸಲು ರಾಜ್ಯ ಸರ್ಕಾರ ಸೂಚನೆ ನೀಡಿರುವುದರಿಂದ ಪ್ರಸ್ತುತ ಸಮಿತಿಯನ್ನು ರಚಿಸಲಾಗಿದ್ದು, ಸಮಿತಿಯು ಸಲ್ಲಿಸಿರುವ ವರದಿಯಂತೆ ಕ್ರಮವಹಿಸಲಾಗುವುದೆಂದರು.<br><br>ಮಾನ್ಯ ಕುಲಪತಿಗಳು ಮಾತನಾಡಿ, ತಾತ್ಕಾಲಿಕ ಉದ್ಯೋಗಿಗಳ ವೇತನವನ್ನು ವಿಶ್ವವಿದ್ಯಾನಿಲಯದ ಆಂತರಿಕ ಸಂಪನ್ಮೂಲದ ಅನುದಾನದಿಂದ ಭರಿಸಲಾಗುತ್ತದೆ. ಸರ್ಕಾರದ ಆದೇಶದಂತೆ ತಾತ್ಕಾಲಿಕ ನೌಕರರ ನೇಮಕಾತಿಯನ್ನು ತರ್ಕಬದ್ಧಗೊಳಿಸುವ ಸಲುವಾಗಿ ಒಂದು ಸಮಿತಿ ರಚಿಸಲಾಗಿದ್ದು, ಆ ಸಮಿತಿಯು ವರದಿಯನ್ನು ಸಲ್ಲಿಸಿರುತ್ತದೆ. ನಿಯಮಾನುಸಾರ ಈ ವರದಿಯನ್ನು ವಿಶ್ವವಿದ್ಯಾನಿಲಯದ ಪ್ರಾಧಿಕಾರಗಳ ಮುಂದೆ ಮಂಡಿಸಿ, ವರದಿಯನ್ವಯ ತಾತ್ಕಾಲಿಕ ಉದ್ಯೋಗಿಗಳನ್ನು ತರ್ಕಬದ್ಧಗೊಳಿಸಿ, ಹೆಚ್ಚುವರಿಯಾಗಿರುವ ತಾತ್ಕಾಲಿಕ ಉದ್ಯೋಗಿಗಳನ್ನು ಕಡಿತಗೊಳಿಸಲು ಕ್ರಮವಹಿಸಲಾಗುವುದೆಂದು ತಿಳಿಸಿದರು.<br><br>ಶ್ರೀ ಸಿ.ಎನ್. ಮಂಜೇಗೌಡ, ವಿಧಾನ ಪರಿಷತ್ ಸದಸ್ಯರು ಇವರು ಮಾತನಾಡಿ, ಕ್ಯಾಂಪಸ್‌ನಲ್ಲಿ ಸಿಸಿ ಕ್ಯಾಮರ ಅಳವಡಿಸಿರುವುದು ಸಹಾಯಕವಾಗಿದೆ. ವಾಯುವಿಹಾರ ಮಾಡುವ ಸಂದರ್ಭದಲ್ಲಿ ವಿಶ್ವವಿದ್ಯಾನಿಲಯದ ಕೆಲವು ಖಾಲಿ ಕಟ್ಟಡಗಳನ್ನು ಗಮನಿಸಿದಾಗ, ಬಾಗಿಲುಗಳು ಇರುವುದಿಲ್ಲ, ಕಿಟಕಿಗಳು ಬಿದ್ದುಹೋಗುತ್ತಿದೆ, ಕಬ್ಬಿಣಗಳು ತುಕ್ಕು ಹಿಡಿದಿದೆ. ಹೀಗೆ ವಿಶ್ವವಿದ್ಯಾನಿಲಯದ ಹಣವು ಸೋರಿಕೆಯಾಗಿದೆ. ಬಜೆಟ್ ಮಂಡಿಸಬೇಕಾದರೆ ಪ್ರತಿಯೊಂದನ್ನು ಪರಿಗಣಿಸಬೇಕಾಗುತ್ತದೆ. ಇವುಗಳ ಬಗ್ಗೆ ಗಮನಹರಿಸಬೇಕೆಂದು ಸಭೆಯ ಗಮನಕ್ಕೆ ತಂದರು. |

| | |
|---|---|
| | ಮಾನ್ಯ ಕುಲಪತಿಗಳು ಮಾತನಾಡಿ, 2018ರವರೆಗೆ ಸರ್ಕಾರದಿಂದ ಅಭಿವೃದ್ಧಿ ಅನುದಾನ ಮಂಜೂರಾಗುತ್ತಿತ್ತು. 2018ರ ನಂತರ ಸರ್ಕಾರದಿಂದ ಯಾವುದೇ ಅಭಿವೃದ್ಧಿ ಅನುದಾನ ಬಿಡುಗಡೆ ಮಾಡಿರುವುದಿಲ್ಲ. ಕೋವಿಡ್ ನಂತರ ಮೈಸೂರು ವಿಶ್ವವಿದ್ಯಾನಿಲಯವಲ್ಲದೇ ಕರ್ನಾಟಕ ರಾಜ್ಯ ಸರ್ಕಾರಕ್ಕೊಳಪಟ್ಟ ಸರ್ಕಾರಿ ವಿಶ್ವವಿದ್ಯಾನಿಲಯಗಳಿಗೂ ಅಂದರೆ ಸುಮಾರು 5-6 ವರ್ಷಗಳಿಂದ ಅಭಿವೃದ್ಧಿ ನಿರ್ವಹಣಾ ಅನುದಾನ ಬಿಡುಗಡೆಯಾಗಿರುವುದಿಲ್ಲ ಎಂದು ತಿಳಿಸಿದರು. |
| **ತೀರ್ಮಾನ** | **ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯ ಕಾಯ್ದೆ 2000, ಪ್ರಕರಣ 31(2) (XV)ರಂತೆ ಸಿದ್ಧಪಡಿಸಲಾಗಿರುವ 2024-2025ನೇ ಆರ್ಥಿಕ ಸಾಲಿನ ಮೈಸೂರು ವಿಶ್ವವಿದ್ಯಾನಿಲಯದ ಆಯವ್ಯಯ ಅಂದಾಜುಗಳ "ಕರಡು" ಅನ್ನು ವಿದ್ಯಾವಿಷಯಕ ಪರಿಷತ್ ಸಭೆಯು ಅನುಮೋದಿಸಿತು.** |
| II.7 | 2023-24ನೇ ಸಾಲಿನ ವಿಶ್ವವಿದ್ಯಾನಿಲಯ ಆಯವ್ಯಯ ಅಂದಾಜುಗಳಲ್ಲಿ ಪರಿಷ್ಕರಿಸಿರುವುದನ್ನು ವಿದ್ಯಾವಿಷಯಕ ಪರಿಷತ್ ಸಭೆಯ ಅನುಮೋದನೆಗಾಗಿ. |
| ತೀರ್ಮಾನ | 2023-24ನೇ ಸಾಲಿನ ವಿಶ್ವವಿದ್ಯಾನಿಲಯ ಆಯವ್ಯಯ ಅಂದಾಜುಗಳಲ್ಲಿ ಅನಿವಾರ್ಯವಾಗಿ ಮತ್ತು ವಿಶ್ವವಿದ್ಯಾನಿಲಯದ ಆರ್ಥಿಕ ಅಗತ್ಯತೆಗಳಿಗನುಸಾರ ಪರಿಷ್ಕರಿಸಿರುವುದನ್ನು ವಿದ್ಯಾವಿಷಯಕ ಪರಿಷತ್ ಸಭೆಯು ಅನುಮೋದಿಸಿತು. |
| II.8 | ವಿಶ್ವವಿದ್ಯಾನಿಲಯದಲ್ಲಿ (1) "ಪ್ರೊ. ಗೋಪಾಲ ಮರಾಠೆ ಕೆ. ಚಿನ್ನದ ಪದಕ", (2) "ಪ್ರೊಫೆಸರ್ ದೊಡ್ಡೇರಿ ಅಶ್ವತ್ಥನಾರಾಯಣರಾವ್ ಶಂಕರ್ ಚಿನ್ನದ ಪದಕ" ಮತ್ತು (3)"Prof. C. Basavaraju's Gold Medal" ದತ್ತಿಗಳನ್ನು ಸ್ಥಾಪನೆ ಮಾಡುವ ಬಗ್ಗೆ. |
| ತೀರ್ಮಾನ | ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000ರ ಪ್ರಕರಣ 31 (2) (X) ಪ್ರಕಾರ ದಾನಿಗಳು ದತ್ತಿಯ ನಿಬಂಧನೆಯಂತೆ ಪ್ರತಿ ವರ್ಷ ಸದರಿ ದತ್ತಿಯ ಮೂಲಧನಕ್ಕೆ ಕ್ರೋಢೀಕೃತವಾಗುವ ಬಡ್ಡಿಯ ಹಣದಲ್ಲಿ ಶೇ.20ರಷ್ಟನ್ನು ದತ್ತಿಯ ಮೂಲ ಧನಕ್ಕೆ ಸೇರಿಸಿ, ಉಳಿದ ಶೇ.80ರಷ್ಟು ಬಡ್ಡಿಯ ಹಣವನ್ನು ಮೇಲೆ ನಮೂದಿಸಿರುವ ಮೂರು ದಾನಿಗಳ ದತ್ತಿಯ ಷರತ್ತಿನಂತೆ ಸಂಬಂಧಿತ ವಿಷಯ/ಪತ್ರಿಕೆಯಲ್ಲಿ ಪ್ರಥಮ ಬಾರಿಗೆ ತೇರ್ಗಡೆಯಾದ ಅತಿ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗೆ ಈ ಕೆಳಕಂಡ ಮೂರು ಚಿನ್ನದ ಪದಕ ದತ್ತಿಗಳನ್ನು ಸ್ಥಾಪನೆ ಮಾಡಲು ಶಿಕ್ಷಣ ಮಂಡಳ ಸಭೆಯು ಅನುಮೋದಿಸಿತು. |

| | |
|---|---|
| **ಷರತ್ತುಗಳು** | This Gold Medal should be awarded to the Candidate who has passed M.Sc. Geology or M.Sc. Applied Geology Examination with Highest Scorer in Sedimentary Petrology & Geotectonic Paper of 3rd Sem. M.Sc. Applied Geology **OR** Highest Scorer in Sedimentary Petrology and Structural Geology Paper of 1st Sem. M.Sc. Geology in First Attempt and Securing Highest Marks. |
| **ಡಿ.ಡಿ. ವಿವರ** | No. 575135/Dt. 08.04.2024 |
| **ಪಾವತಿಸಿರುವ ಮೊತ್ತ** | Rs.1,00,000/- |
| **ದತ್ತಿಯ ಹೆಸರು** | **"Prof. C. Srikantappa and Late Prof. A.S. Janardhan Gold Medal"** |

<table>
<tr><td></td><td>
<table>
<tr><td>ಷರತ್ತುಗಳು</td><td>This Gold Medal should be awarded to the Candidate who has passed M.Sc. Geology or M.Sc. Applied Geology Examination with Highest Scorer in Advanced Igneous Petrology Paper of 3rd Sem. of M.Sc. Applied Geology OR Highest Scorer in Igneous & Metamorphic Petrology Paper of 2nd Sem. of M.Sc. Geology in First Attempt and Securing Highest Marks.</td></tr>
<tr><td>ಡಿ.ಡಿ. ವಿವರ</td><td>No. 575134/Dt. 08.04.2024</td></tr>
<tr><td>ಪಾವತಿಸಿರುವ ಮೊತ್ತ</td><td>Rs.1,00,000/-</td></tr>
</table>
<table>
<tr><td>ದತ್ತಿಯ ಹೆಸರು</td><td>"Smt. Sharadamma and Sri. K.G.Narasimha Shastry Gold Medal"</td></tr>
<tr><td>ಷರತ್ತುಗಳು</td><td>This Gold Medal should be awarded to the Candidate who has passed M.Sc. Geology in First Attempt and Securing Highest Marks in All Sem.</td></tr>
<tr><td>ಡಿ.ಡಿ. ವಿವರ</td><td>No. 575133/Dt. 08.04.2024</td></tr>
<tr><td>ಪಾವತಿಸಿರುವ ಮೊತ್ತ</td><td>Rs.1,00,000/-</td></tr>
</table>
</td></tr>
<tr><td>III.1</td><td>ದಿನಾಂಕ: 14-06-2024ರಂದು ನಡೆದ ಸ್ಕೂಲ್ ಆಫ್ ಇಂಜಿನಿಯರಿಂಗ್ ನಿಕಾಯ ಸಭೆಯ ನಡಾವಳಿಗಳನ್ನು ಅನುಮೋದನೆಗಾಗಿ ಸಲ್ಲಿಸುವ ಬಗ್ಗೆ.</td></tr>
<tr><td></td><td>ಪ್ರೊ. ಎಸ್.ಜೆ. ಮಂಜುನಾಥ, ಡೀನರು, ಸ್ಕೂಲ್ ಆಫ್ ಇಂಜಿನಿಯರಿಂಗ್ ನಿಕಾಯ ಇವರು ಮಾತನಾಡಿ ದಿನಾಂಕ: 14-06-2024ರಂದು ನಡೆದ ಸ್ಕೂಲ್ ಆಫ್ ಇಂಜಿನಿಯರಿಂಗ್ ನಿಕಾಯ ಸಭೆಯ ಶಿಫಾರಸ್ಸುಗಳನ್ನು ಶಿಕ್ಷಣ ಮಂಡಳಿ ಸಭೆಯು ಅನುಮೋದಿಸಬೇಕೆಂದು ಕೋರಿದರು.</td></tr>
<tr><td>ತೀರ್ಮಾನ</td><td>ದಿನಾಂಕ: 14-06-2024ರಂದು ನಡೆದ ಸ್ಕೂಲ್ ಆಫ್ ಇಂಜಿನಿಯರಿಂಗ್ ನಿಕಾಯ ಸಭೆಯಲ್ಲಿ ತೆಗೆದುಕೊಂಡಿರುವ ತೀರ್ಮಾನಗಳನ್ನು ವಿದ್ಯಾವಿಷಯಕ ಪರಿಷತ್ ಸಭೆಯು ಅನುಮೋದಿಸಿತು.</td></tr>
<tr><td>III.2</td><td>ದಿನಾಂಕ: 14-06-2024ರಂದು ನಡೆದ ಶಿಕ್ಷಣ ನಿಕಾಯ ಸಭೆಯ ನಡಾವಳಿಗಳನ್ನು ಅನುಮೋದನೆಗಾಗಿ ಸಲ್ಲಿಸುವ ಬಗ್ಗೆ.</td></tr>
<tr><td></td><td>Specialized ಕೋರ್ಸ್‌ಗಳ ಶಿಫಾರಸ್ಸುಗಳ ಶಿಕ್ಷಣ ನಿಕಾಯ ಸಭೆಯ ಶಿಫಾರಸ್ಸು ನಿರ್ಣಯಗಳ ಅನುಮೋದನೆ ಬಗ್ಗೆ.</td></tr>
<tr><td></td><td>ಡಾ. ಸಿ ವೆಂಕಟೇಶ್‌ರವರು ಮಾತನಾಡಿ, ದೈಹಿಕ ಶಿಕ್ಷಣ ವಿಭಾಗದ ಎಂ.ಎಡ್, ಬಿ.ಎಡ್ ವಿದ್ಯಾರ್ಥಿಗಳು ಎಂ.ಎ.ಎ.ಸಿ.ಗೆ ಭೇಟಿ ನೀಡುತ್ತಿರುತ್ತಾರೆ ದಯಮಾಡಿ ಎಂ.ಎಡ್ ರೆಗ್ಯುಲೇಷನ್‌ನಲ್ಲಿ Monitoring Assessment Academic Committee ಭೇಟಿ ನೀಡುವುದನ್ನು ತೆಗೆಯಬೇಕೆಂದು ಸಭೆಯ ಗಮನಕ್ಕೆ ತಂದರು.<br><br>ಮಾನ್ಯ ಕುಲಪತಿಗಳು ಮಾತನಾಡಿ, ರೆಗ್ಯುಲೇಷನ್‌ನಲ್ಲಿ ಇಲ್ಲವಾದರೆ, ಅಧ್ಯಯನ ಮಂಡಳಿ ಸಭೆಯಲ್ಲಿ ತೀರ್ಮಾನ ತೆಗೆದುಕೊಳ್ಳಬಹುದೆಂದರು.</td></tr>
</table>

| | |
|---|---|
| | ಪ್ರೊ. ಸಿ. ವೆಂಕಟೇಶ್, ಡೀನರು, ಶಿಕ್ಷಣ ನಿಕಾಯ ಇವರು ಮಾತನಾಡಿ ದಿನಾಂಕ:14-06-2024ರಂದು ನಡೆದ ಶಿಕ್ಷಣ ನಿಕಾಯ ಸಭೆಯ ಶಿಫಾರಸ್ಸುಗಳನ್ನು ಹಾಗೂ Specialized ಕೋರ್ಸ್‌ಗಳ ಶಿಫಾರಸ್ಸುಗಳನ್ನು ವಿದ್ಯಾವಿಷಯಕ ಪರಿಷತ್ ಸಭೆಯು ಅನುಮೋದಿಸಬೇಕೆಂದು ಕೋರಿದರು. |
| **ತೀರ್ಮಾನ** | **ದಿನಾಂಕ: 14-06-2024ರಂದು ನಡೆದ ಶಿಕ್ಷಣ ನಿಕಾಯ ಸಭೆಯಲ್ಲಿ ತೆಗೆದುಕೊಂಡಿರುವ ತೀರ್ಮಾನಗಳನ್ನು ಹಾಗೂ Specialized ಕೋರ್ಸ್‌ಗಳ ಶಿಫಾರಸ್ಸುಗಳನ್ನು ವಿದ್ಯಾವಿಷಯಕ ಪರಿಷತ್ ಸಭೆಯು ಅನುಮೋದಿಸಿತು.** |
| III.3 | ದಿನಾಂಕ: 15-06-2024ರಂದು ನಡೆದ ವಾಣಿಜ್ಯ ನಿಕಾಯ ಸಭೆಯ ನಡಾವಳಿಗಳನ್ನು ಅನುಮೋದನೆಗಾಗಿ ಸಲ್ಲಿಸುವ ಬಗ್ಗೆ. |
| | Specialized ಕೋರ್ಸ್‌ಗಳ ವಾಣಿಜ್ಯ ನಿಕಾಯ ಸಭೆಯ ಶಿಫಾರಸ್ಸು ನಿರ್ಣಯಗಳ ಅನುಮೋದನೆ ಬಗ್ಗೆ. |
| | ಪ್ರೊ. ಬಿ. ಮಹಾದೇವಪ್ಪ, ಡೀನರು, ವಾಣಿಜ್ಯ ನಿಕಾಯ, ಇವರು ಮಾತನಾಡಿ ದಿನಾಂಕ:15-06-2024ರಂದು ಜರುಗಿದ ವಾಣಿಜ್ಯ ನಿಕಾಯ ಹಾಗೂ Specialized ಕೋರ್ಸ್‌ಗಳ ಶಿಫಾರಸ್ಸುಗಳನ್ನು ಶಿಕ್ಷಣ ಮಂಡಳಿ ಸಭೆಯು ಅನುಮೋದಿಸಬೇಕೆಂದು ಕೋರಿದರು. |
| **ತೀರ್ಮಾನ** | **ದಿನಾಂಕ: 15-06-2024ರಂದು ನಡೆದ ವಾಣಿಜ್ಯ ನಿಕಾಯ ಸಭೆಯಲ್ಲಿ ತೆಗೆದುಕೊಂಡಿರುವ ತೀರ್ಮಾನಗಳನ್ನು ಹಾಗೂ Specialized ಕೋರ್ಸ್‌ಗಳ ಶಿಫಾರಸ್ಸುಗಳನ್ನು ವಿದ್ಯಾವಿಷಯಕ ಪರಿಷತ್ ಸಭೆಯು ಅನುಮೋದಿಸಿತು.** |
| III.4 | ದಿನಾಂಕ: 18-06-2024ರಂದು ನಡೆದ ಕಲಾ ನಿಕಾಯ ಸಭೆಯ ನಡಾವಳಿಗಳನ್ನು ಅನುಮೋದನೆಗಾಗಿ ಸಲ್ಲಿಸುವ ಬಗ್ಗೆ. |
| | Specialized ಕೋರ್ಸ್‌ಗಳ ಕಲಾ ನಿಕಾಯದ ಸಭೆಯ ಶಿಫಾರಸ್ಸು ನಿರ್ಣಯಗಳ ಅನುಮೋದನೆ ಬಗ್ಗೆ. |
| | ಪ್ರೊ.. ಎಂ.ಬಿ. ಮಂಜುನಾಥ, ಡೀನರು ಕಲಾ ನಿಕಾಯ, ಇವರು ಮಾತನಾಡಿ ದಿನಾಂಕ:18-06-2024ರಂದು ಜರುಗಿದ ಕಲಾ ನಿಕಾಯ ಸಭೆಯ ಶಿಫಾರಸ್ಸುಗಳು ಹಾಗೂ Specialized ಕೋರ್ಸ್‌ಗಳ ಶಿಫಾರಸ್ಸುಗಳನ್ನು ವಿದ್ಯಾವಿಷಯಕ ಪರಿಷತ್ ಸಭೆಯು ಅನುಮೋದಿಸಬೇಕೆಂದು ಕೋರಿದರು. |
| **ತೀರ್ಮಾನ** | **ದಿನಾಂಕ: 18-06-2024ರಂದು ನಡೆದ ಕಲಾ ನಿಕಾಯ ಸಭೆಯಲ್ಲಿ ತೆಗೆದುಕೊಂಡಿರುವ ತೀರ್ಮಾನಗಳನ್ನು ಹಾಗೂ Specialized ಕೋರ್ಸ್‌ಗಳ ಶಿಫಾರಸ್ಸುಗಳನ್ನು ವಿದ್ಯಾವಿಷಯಕ ಪರಿಷತ್ ಸಭೆಯು ಅನುಮೋದಿಸಿತು.** |
| III.5 | ದಿನಾಂಕ: 19-06-2024ರಂದು ನಡೆದ ವಿಜ್ಞಾನ ಮತ್ತು ತಂತ್ರಜ್ಞಾನ ನಿಕಾಯ ಸಭೆಯ ನಡಾವಳಿಗಳನ್ನು ಅನುಮೋದನೆಗಾಗಿ ಸಲ್ಲಿಸುವ ಬಗ್ಗೆ. |
| | Specialized ಕೋರ್ಸ್‌ಗಳ ವಿಜ್ಞಾನ ಮತ್ತು ತಂತ್ರಜ್ಞಾನ ನಿಕಾಯದ ಸಭೆಯ ಶಿಫಾರಸ್ಸು ನಿರ್ಣಯಗಳ ಅನುಮೋದನೆ ಬಗ್ಗೆ. |
| | ಪ್ರೊ. ಸೊನರ್ ನಂದಪ್ಪ, ಡಿ. ಡೀನರು, ವಿಜ್ಞಾನ ಮತ್ತು ತಂತ್ರಜ್ಞಾನ ನಿಕಾಯ ಇವರು ಮಾತನಾಡಿ ದಿನಾಂಕ: 19-06-2024ರಂದು ನಡೆದ ವಿಜ್ಞಾನ ಮತ್ತು ತಂತ್ರಜ್ಞಾನ ನಿಕಾಯ ಸಭೆಯ ಶಿಫಾರಸ್ಸುಗಳು ಹಾಗೂ Specialized ಕೋರ್ಸ್‌ಗಳ ಶಿಫಾರಸ್ಸು ನಿರ್ಣಯಗಳನ್ನು ಹಾಗೂ ಗಣಿತಶಾಸ್ತ್ರ ಅಧ್ಯಯನ ಮಂಡಳಿಯ ಶಿಫಾರಸ್ಸಿನಲ್ಲಿ ಕೆಲವು |

| | |
|---|---|
| | ಬದಲಾವಣೆ ಮಾಡಿರುವುದನ್ನು ವಿದ್ಯಾವಿಷಯಕ ಪರಿಷತ್ ಸಭೆಯು ಅನುಮೋದಿಸಬೇಕೆಂದು ಕೋರಿದರು. |
| **ತೀರ್ಮಾನ** | **ದಿನಾಂಕ: 19-06-2024ರಂದು ನಡೆದ ವಿಜ್ಞಾನ ಮತ್ತು ತಂತ್ರಜ್ಞಾನ ನಿಕಾಯ ಸಭೆಯಲ್ಲಿ ತೆಗೆದುಕೊಂಡಿರುವ ತೀರ್ಮಾನಗಳನ್ನು ಹಾಗೂ Specialized ಕೋರ್ಸ್‌ಗಳ ಶಿಫಾರಸ್ಸುಗಳನ್ನು ವಿದ್ಯಾವಿಷಯಕ ಪರಿಷತ್ ಸಭೆಯು ಅನುಮೋದಿಸಿತು.** |
| III.6 | ದಿನಾಂಕ: 19-06-2024ರಂದು ನಡೆದ ಕಾನೂನು ನಿಕಾಯ ಸಭೆಯ ನಡಾವಳಿಗಳನ್ನು ಅನುಮೋದಿಸುವ ಬಗ್ಗೆ. |
| | ಪ್ರೊ. ಎಂ. ಸುರೇಶ್ ಬೆಂಜಮಿನ್, ಡೀನರು, ಕಾನೂನು ನಿಕಾಯ, ಇವರು ಮಾತನಾಡಿ ದಿನಾಂಕ: 19-06-2024ರಂದು ಜರುಗಿದ ಕಾನೂನು ನಿಕಾಯ ಸಭೆಯ ಶಿಫಾರಸ್ಸುಗಳನ್ನು ವಿದ್ಯಾವಿಷಯಕ ಸಭೆಯು ಅನುಮೋದಿಸಬೇಕಾಗಿ ಕೋರಿದರು. |
| **ತೀರ್ಮಾನ** | **ದಿನಾಂಕ: 19-06-2024ರಂದು ನಡೆದ ಕಾನೂನು ನಿಕಾಯ ಸಭೆಯಲ್ಲಿ ತೆಗೆದುಕೊಂಡಿರುವ ತೀರ್ಮಾನಗಳನ್ನು ವಿದ್ಯಾವಿಷಯಕ ಪರಿಷತ್ ಸಭೆಯು ಅನುಮೋದಿಸಿತು.** |

ಮಾನ್ಯ ಕುಲಸಚಿವರು ವಿಶ್ವವಿದ್ಯಾನಿಲಯದ ಅಭಿವೃದ್ಧಿ ಸಂಬಂಧ ಬಹಳಷ್ಟು ಮಾರ್ಗದರ್ಶನ ನೀಡಿರುವ ವಿಧಾನ ಪರಿಷತ್ ಸದಸ್ಯರಾದ ಶ್ರೀ ಸಿ.ಎನ್. ಮಂಜೇಗೌಡ ಅವರಿಗೆ, ಸಭೆಯಲ್ಲಿ ಸೂಕ್ತ ಸಲಹೆ ಮತ್ತು ನಿರ್ಣಯಗಳನ್ನು ತೆಗೆದುಕೊಳ್ಳಲು ಸಹಕರಿಸಿದ ಗೌರವಾನ್ವಿತ ಅಧ್ಯಕ್ಷರು ಹಾಗೂ ಸದಸ್ಯರುಗಳಿಗೆ ವಂದನೆಗಳನ್ನರ್ಪಿಸುವ ಮೂಲಕ ಸಭೆಯು ಮುಕ್ತಾಯವಾಯಿತು.

ಸಹಿ/-
**ಸದಸ್ಯ ಕಾರ್ಯದರ್ಶಿ ಹಾಗೂ ಕುಲಸಚಿವರು**

ಸಹಿ/-
**ಅಧ್ಯಕ್ಷರು ಹಾಗೂ ಕುಲಪತಿಗಳು**